ಕೊರವಂಜಿ



ಜೂನ್ ೧೯೫೧

★

ಸಂಪಾದಕರು :

ಶ್ರೀ॥ ರಾ. ಶಿ.

ಬರಹಗಾರರು :

ಶ್ರೀ॥ ಪ್ರಸಾದ್

ಶ್ರೀ॥ ಗಂಗಾಧರ

ಶ್ರೀ॥ ಕೆ. ಬಿ. ಶ್ರೀ.

ಶ್ರೀಮತಿ ಟಿ. ಸುನಂದಮ್ಮ

ಶ್ರೀ॥ ರೇವಣ್ಣ

ಶ್ರೀ॥ ಹೇಮು

ಶ್ರೀ॥ ಪಾರ್ಥ

ಶ್ರೀ॥ ಪಾಟೀಲ

ಶ್ರೀ॥ ಕಾಮತ್

ಶ್ರೀ॥ ಎ. ಎಸ್. ರಾಮಕೃಷ್ಣ


ಶ್ರೀ॥ ಡಿಬ್ಬಯ್ಯ

ಶ್ರೀ॥ ಕುಮಾರ್


ಶ್ರೀಮತಿ ಸರೋಜಿನಿ ಆರೂರು

ಇತ್ಯಾದಿ, ಇತ್ಯಾದಿ.

ತಿಳಿನಗೆಯ ಮಾಸಪತ್ರಿಕೆ




ಅವಳ ಮನಮೋಹಕ ಸೌಂದರ್ಯಕ್ಕೆ
ಕಾರಣ ವೆಂದರೆ
RAJA SNOW
ರಾಜಾ
ಸ್ನೋ
MANYAM & CO., BANGALORE, MADRAS, MADURA, BOMBAY.



ವೈಟೋಫೆರಿನ್

(ಆಧುನಿಕ ಶಕ್ತಿವರ್ಧಕ ಟಾನಿಕ್)

ಇದರಲ್ಲಿ "ಎ" "ಬಿ" ಮತ್ತು "ಡಿ" ಎಂಬ ವೈಟಮಿನ್ನುಗಳೂ, ಐರನ್, ಕ್ಯಾಲ್ಸಿಯಂ ಮುಂತಾದ ಲೋಹ ವಿಶೇಷಗಳೂ, ಶುದ್ಧಗೊಳಿಸಿದ ತಾಮ್ರವೂ, ಮತ್ತು ಮಾಲ್ಟ್ ಸಾರ, ಜೇನುತುಪ್ಪಗಳನ್ನು ಸೇರಿಸಿ ತಯಾರಿಸಿದ ಒಂದು ಅಮೃತ ಪಾನ. ಇದರಲ್ಲಿ ದೇಹಶಕ್ತಿಗೆ ಬೇಕಾದ ಸಕಲ ಔಷಧಗಳ ಸಮೂಹವೂ ಇದೆ. ಖಾಯಿಲೆಯಿಂದ ಎದ್ದವರಿಗೂ, ಬಸುರಿ ಬಾಣಂತಿಯರ ದೇಹ ದಾರ್ಢ್ಯಕ್ಕೂ ಇದು ಅತ್ಯುತ್ತಮವಾದ ಔಷಧ. ಸೇವಿಸಲು ಬಹಳ ರುಚಿಯಾಗಿಯೂ ಮತ್ತು ಮಧುರವಾಗಿಯೂ ಇದೆ.

★ ★

ತಯಾರಕರು :

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರೆಟರಿ, ಲಿಮಿಟೆಡ್

ಮಲ್ಲೇಶ್ವರಂ - - - ಬೆಂಗಳೂರು 3.

Janavani June 1951



ಸಂಪುಟ ೧೦ | ಜೂನ್ ೧೯೫೧ | ಸಂಚಿಕೆ ೩

ಕುಹಕಿಡಿಗಳು

★ ★

ಈ ಸಾರಿ ವಿದ್ಯಾರ್ಥಿಗಳು ಕಾಲೇಜಿಗೆ ಸೇರುವಾಗ, ಅರ್ಜಿಯಲ್ಲಿ 'ಕಾನ್‌ಸ್ಟಿಟ್ಯೂಷನ್ ಇಂತಹ ಕಲಂವಿನ ಇಂತಹ ವಿಭಾಗದ ನೆರಳಲ್ಲಿ ನನಗೆ ಸ್ಥಾನ ಕೊಡಲೇ ಬೇಕು' ಎಂದು ಬರೆಯಲು ಸನ್ನಾಹ ನಡೆಸುತ್ತಿದ್ದಾರಂತೆ.

* * *

ನಮ್ಮೂರ ಮಾರ್ಕೆಟ್ಟಿಗೆ ಪಡುವಲಕಾಯಿ ಬಂದಿದೆಯಂತೆ —ಯಾವ ತುದಿಯಲ್ಲಿ ಕ್ಯೂನಿಲ್ಲಬೇಕು ಎಂಬುದೇ ನಮ್ಮ ಮಹಿಳೆಯರ ಸಮಸ್ಯೆಯಂತೆ—.

* * *

ಇನ್ನುಮೇಲೆ ಕಬ್ಬನ ಬನದಲ್ಲಿ ಸಾರ್ವತ್ರಿಕ ಕಾಮನಹಬ್ಬ ನೆರವೇರಿಸುತ್ತಾರೆ ಎಂಬ ಸುದ್ದಿ ಖಂಡಿತ ನಿರಾಧಾರ.

* * *

ಸಾಕ್ಷಿ ಹೇಳುಕ್ಕೆ ಕೋರ್ಟಿಗೆ ಹೋದರೆ,

—ಕೋರ್ಟಿನ ಮುನ್ಸೀಫ್ ಸಾಕ್ಷಿ ಹೇಳುಕ್ಕೆ ಬೇರೆ ಕೋರ್ಟಿಗೆ ಹೋಗಿದ್ದರಂತೆ.

* * *

ಶ್ರೀ ಡಿಕ್ಸನ್‌ರವರು ಪಾಕೀಸ್ಥಾನವು ಆಕ್ರಮಣಕಾರರು ಎಂದು ಹೇಳಿದ ಭಾಗವನ್ನು ಶ್ರೀ ಜನಾಬ್ ಜಫರುಲ್ಲಾಖಾನರು ಕಾಶ್ಮೀರದ ವರದಿಯಿಂದ ತೆಗೆದುಹಾಕಿ ಶ್ರೀ ಗ್ರಾಹಾಂರವರಿಗೆ ಕೊಟ್ಟರುವಂತೆ.

* * *

"ಶಿಲನೇ ಪ್ಯಾರಲಲ್" ಈಗ ಇಂಗ್ಲಾಂಡಿನ ಮೇಲಿದೆ.

—ಎಂಬ ಸುದ್ದಿ ಬುಡರಹಿತವಂತೆ

* * *

ಜ|| ಮೆಕಾರ್ಥರ್‌ರವರು "ಕ್ರಿಸ್‌ಮಸ್ ಹಬ್ಬಕ್ಕೆ ಮನೆ" ಎಂದು ಘೋಷಿಸಿದರಂತೆ.

—ಹೋಗಲಿ! ನಮ್ಮ ಯುಗಾದಿಗಾದರೂ ಅವರು ಮನೆ ಸೇರಿದರಲ್ಲ !!

* * *

ದವಾಖಾನೆ 'ಕ್ಯೂ', ಸೌದೆ ಅಂಗಡೀತನಕ ನಿಂತಿರುತ್ತದೆ ಎಂದು ಕುಹಕಿಯೊಬ್ಬರು ಬರೆದಿದ್ದಾರೆ.

* * *

ಶ್ರೀಯುತ ದೇಶಮುಖರನ್ನು ನೋಡಿದ ಹಲವಾರು ಜನರು ಈಗ ಸಿಗರೇಟ್ ಅಭ್ಯಾಸ ಬಿಟ್ಟುಬಿಟ್ಟು ನಶ್ಯ ಏರಿಸಲು ಆರಂಭಿಸಿರುವರಂತೆ.

* * *

ಬ್ಯಾಂಕ್ ಡಕಾಯಿತನೊಬ್ಬ ಇನ್ನು ಸಿಕ್ಕಿಲ್ಲವಂತೆ.

—"ಅರ್ಜೆಂಟ್" ಎಂದು ಗುರ್ತುಮಾಡಿದ ಕೇಂದ್ರ ಕಛೇರಿಯ ಹಾಳೆಗಳ ಮಧ್ಯೆ ಅವಿತುಕೊಂಡಿರಬಹುದು ಅಲ್ಲವೇ !

* * *

'ಆ! ಕೃಪಲಾನಿ ಕಾಂಗ್ರೇಸಿಗೆ ರಾಜೀನಾಮೆಕೊಟ್ಟರು' ಎಂದು ಮಾಸಲ ಗಾಂಧೀಟೋಪಿಯವನೊಬ್ಬ ಎಗರಾಡಿದ್ದೂ ಎಗರಾಡಿದ್ದೇ ನಮ್ಮೂರಲ್ಲಿ.

—ಧನಿಕತಮ್ಮನ ಮದುವೇಲಿ ಬಡ ಅಕ್ಕ ಎಗರಾಡಿದಹಾಗೇ!

* * *

ಉರಿಗಾಳು

"ಪುನಃ ವನಮಹೋತ್ಸವ"........ಏಕೆ? ಕಳೆದ ವರ್ಷ ಜನನಾಯಕರು ಕೊಟ್ಟ ಭಾಷಣಗಳನ್ನು ಜನತೆ ಇಷ್ಟರಲ್ಲಿ ಮರೆತಿರಬಹುದೆಂದಲೆ?

* * *

"೨ನೇ ಶತಮಾನದ ಸೀಸದ ನಾಣ್ಯಗಳ ಪತ್ತೆ, ಚಿತ್ರದುರ್ಗದ ಸಮೀಪ" ೨೦ನೇ ಶತಮಾನದಲ್ಲೂ ಅಂಥವೇ ಬರುವ ಸೂಚನೆ ಇದೆ.

* * *

೧೦೦ ಪೌಂಡು ರಬ್ಬರಿಗೆ ೧೨೮ ರೂ. ಬೆಲೆ, ಅದರ ಮೇಲೆ ಮಾರ ಕೂಡದು, ಎಂದು ಸರ್ಕಾರ ಆಜ್ಞೆಮಾಡಿದೆ.......ನಮ್ಮ ಮನೆ ಹುಡುಗರಿಗೆ ಇದನ್ನು ತಿಳಿಸಿ ಎಚ್ಚರಿಸಬೇಕು.

* * *

ಪಠ್ಯಪುಸ್ತಕಗಳನ್ನು ಕೊಂಡುಕೊಳ್ಳದೆಯೇ ಅನೇಕ ವಿದ್ಯಾರ್ಥಿಗಳು ವರ್ಷೆ ವರ್ಷೆ ಪಾಸುಮಾಡುತ್ತಿರುವುದರಿಂದ, ತಮ್ಮ ಜೀವನವೇ ಕಷ್ಟತರವಾಗಿದೆ ಎಂದು ಪುಸ್ತಕದಂಗಡಿಯವರು ಚಳುವಳಿ ಹೂಡಿರುವರಂತೆ.

* * *

"ಕೊರಿಯ ಧಾಳಿ ಪ್ರತಿಧಾಳಿಗಳ ಉರಿಮಳೆಯಿಂದ ಮರಳುಗಾಡಾಗಿದೆ" (ಸುದ್ದಿ) ಆದರೂ, ಪತ್ರಿಕೆಗಳು ಮಾತ್ರ ಅಮೇರಿಕನರು ಹಿಡಿದ, ಬಿಟ್ಟ, ನಗರ ಗಳ ಹೆಸರುಗಳನ್ನು ಇನ್ನೂ ಸಾರುತ್ತಿವೆ.

* * *

ಕಾರಾಗೃಹದಲ್ಲಿದ್ದುಕೊಂಡೇ ಹೊರಗೆ ಬರದೇನೇ ಚುನಾವಣೆಗೆ ನಿಂತು ಸ್ಪರ್ಧಿಸಬಹುದೆಂಬ ರಿಯಾಯಿತಿ ತೋರಿಸಲಾಗಿದೆ.. ಹಾಗಾದರೆ, ಅದೇ ತುಂಬ ಅನುಕೂಲ, ಅನೇಕರಿಗೆ.

* * *

ರೈತ ಜನತೆಯನ್ನು ನಿದ್ದೆಯಿಂದ ಎಚ್ಚರಿಸುವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಭಾಗವಹಿಸಬೇಕಾಗಿದೆ (ಭಾಷಣ) ದುಡಿದು ಬಾಡಿ ಬಳಲಿರುವ ರೈತ ಪಾಪ, ನಿದ್ದೇನೂ ಮಾಡಕೂಡದೆ?

* * *

"ಮಹಾತ್ಮ ಗಾಂಧಿಗೆ ಜಯವಾಗಲಿ" ಎಂದು ಯಾರೂ ಮುಂದಿನ ಚುನಾವಣೆ ಕಾಲದಲ್ಲಿ ಪ್ರಚಾರ ಮಾಡಕೂಡದೆಂದು ಗಾಂಧೀ ಸ್ಮಾರಕ ನಿಧಿ ಸಮಿತಿಯವರು ಕೇಳಿಕೊಳ್ಳಬಹುದಂತೆ....ಅದು ತೀರ ಅಸಾಧ್ಯ.

* * *

ಸ್ಕೂಲು ಕಾಲೇಜು ಫೀಸನ್ನು ಹೆಚ್ಚಿಸುವುದರಿಂದ, ಬಾಲಕ ಬಾಲಕಿಯರು ವಿದ್ಯಾಭ್ಯಾಸದ ಬೆಲೆಯನ್ನು ಮತ್ತಷ್ಟು ಮನಮುಟ್ಟುವಂತೆ ಅರಿತುಕೊಳ್ಳಲು ಅನುಕೂಲವಾಗುವುದೆಂದು ಇಬ್ಬರು ಅಭಿಪ್ರಾಯಪಡುತ್ತಿದಾರೆ.

* * *

ಕಳೆದ ವರ್ಷ ನಡೆಲಾದ ಸಸಿಗಳನ್ನೆಲ್ಲ ತಂದು ಪಿಂಗಡಿಸಿ ಮುಖ್ಯಪಟ್ಟಣಗಳಲ್ಲಿ ಪ್ರದರ್ಶಿಸಬೇಕೆಂದು ವನಮಹೋತ್ಸವೋತ್ಸಾಹಿಗಳೊಬ್ಬರು ಸರ್ಕಾರಕ್ಕೆ ಪತ್ರ ಬರೆದಿರುವರಂತೆ.

* * *

"ವಿರೋಧ ಪಕ್ಷವೊಂದು ಇದ್ದೇ ಇರಬೇಕು; ಅದಿಲ್ಲದೆ ಪ್ರಜಾಪ್ರಭುತ್ವ ಸಮರ್ಪಕವಾಗಿ ನಡೆಯುವಂತೆಯೇ ಇಲ್ಲ" (ಭಾಷಣ) ಇದಕ್ಕೋಸ್ಕರವೇ, ಭಾರಿ ಸಂಬಳದ ಸರ್ಕಾರಿ ಚಾಕರಿಗಳನ್ನು ಮಿತಗೊಳಿಸಿರುವುದು.

* * *

ಹೆಣ್ಣು ಸೊಳ್ಳೆಯ ದನಿಯನ್ನು ಧ್ವನಿವರ್ಧಕ ಮೂಲಕ ಪ್ರಸಾರಮಾಡಿ ಲಕ್ಷಾಂತರ ಗಂಡು ಸೊಳ್ಳೆಗಳನ್ನು ಆಕರ್ಷಿಸಿ ಸಾಯಿಸುವ ಯಂತ್ರವೊಂದನ್ನು ಡಾ॥ ಕಾನ್ ಕಂಡುಹಿಡಿದಿರುವರು....ಆದರೆ, ಮಲೇರಿಯಾ ಹರಡುವುದು ಹೆಣ್ಣು ಸೊಳ್ಳೆಗಳಿಂದಂತಲ್ಲಾ.

* * *

ಕಾಲಕ್ರಮದಲ್ಲಿ ತಿರುಪೆ ಬೇಡುವುದನ್ನು ಕಾನೂನು ರೀತ್ಯಾ ತೊಡೆದು ಹಾಕಬಹುದು (ರಾಜಾಜಿ) ಕಾಲಕ್ರಮದಲ್ಲಿ ಸಾಧ್ಯವಾದರೂ, ಎಡಗೈ ಕ್ರಮದಲ್ಲಿ ಅದು ಇದ್ದೇ ಇರುತ್ತದೆ.

* * *

ಚುನಾವಣೆ ಕಾಲಕ್ಕೆ ವಿವಿಧ ಪಕ್ಷಗಳಿಗೆ ಬೇಕಾಗಿರುವ ಅಂಕಿ ಅಂಶಗಳನ್ನು ತಯಾರಿಸಿಕೊಡಲು ತಜ್ಞರಾದ ಗಣಿತ ಶಾಸ್ತ್ರಜ್ಞರು ಅತ್ಯವಶ್ಯಕ (ವಿಶ್ವವಿದ್ಯಾನಿಲಯದ ವರದಿ)

* * *

ಅಮೇರಿಕನ್ನರೆಲ್ಲರೂ, ಭಾರತದ ಅನ್ನಾಭಾವ ಪರಿಸ್ಥಿತಿಯನ್ನು ಕೇಳಿ, ಒಂದೊಂದು ಮುಷ್ಟಿ ಗೋಧಿಯನ್ನೀಯಲೀ... (ವರದಿ) ಮುಷ್ಟಿ ಪ್ರದರ್ಶನ?

* * *

ಒಟ್ಟು ಇಲಾಖೆಯಲ್ಲಿ, ೨೫ ಸಾವಿರ ಪೋರ್ಟರುಗಳಿರುವರು (ಶ್ರೀ ಸಂತಾನಂ)....ಈ ಅಂಕಿ ಸುಳ್ಳಿರಬೇಕು; ಮೊನ್ನೆ ಬೆಂಗಳೂರು ಸ್ಟೇಷನ್ನಲ್ಲಿ ನಮ್ಮ ಟ್ರಂಕು ಬೆಡ್ಡಿಂಗಿನ ಸುತ್ತ ಇದಕ್ಕಿಂತ ಅಧಿಕ ಸಂಖ್ಯೆ ಪೋರ್ಟರುಗಳು ನಿಂತಿದ್ದ ಹಾಗೆ ನಮಗೆ ತೋರಿತು.

ಕೊರವಾವಲೋಕನ

ನಾನು ಬಂದಾಗ ಕೊರವ ತನ್ನ ಎಡತೋಳನ್ನು ಮೆಲ್ಲಮೆಲ್ಲಗೆ ಪಾಲೀಷ್ ಮಾಡ್ತಾ ಇದ್ದ. ಬಿಸಿಲು ಮಳೆ ಬಂದಹಾಗೆ, ನಾಯಿ ನರಿ ಮದುವೆ ಆದ ಹಾಗೆ, ಅವನ ಮುಖದ ಮೇಲೆ ನೋವು, ಆನಂದ ಎರಡೂ ತಾಂಡವವಾಡುತ್ತಿತ್ತು. "ಎಲಾ! ಇವನ, ಇವನಿಗೇನು ಬೇನೆ" ಎಂದಂದು ಕೊಂಡು ಕೇಳಿದೆ, ಕರು ಹೋರಿಯನ್ನು ಕೇಳುವಂತೆ "ಯಾಕಯ್ಯಾ! ಕೊರವ ತೋಳನ್ನು ಯಾಕೆ ಹಾಗೆ ಹಿತವಾಗಿ ಹಿಸುಕುತ್ತಾ ಇದಿ" ಅಂತ. ಕುಹಕ ಮಿಂಚು ಸೇರಿಸಿದೆ 'ಯಾಕೆ ಯಾರ ತೋಳಾದರೂ ನಿನ್ನ ತೋಳಿಗೆ ಸಿಕ್ಕಿ ನೋವು ಮಾಡಿತೇ' ಅಂತ.

ಎರಡು ನಿಮಿಷ ಎವೆ ಇಕ್ಕಿ ನೋಡಿದ, ಬಂಗಾರು ಪೇಟೆಯಲ್ಲಿ ಬಂಗಾರ ದವರು ಬಂಗಾರ ಅಜಮಾಯಿಷಿ ಮಾಡುವ ಹಾಗೆ. ಅನಂತರ ಪಲುಕಿದ.

'ನೀನು ಹೇಳಿದ್ದೇ ದಿಟ. ಇವತ್ತು ಕೀಚಕನ ಹಾಗಾದೆ ನಾನು. ಪಕ್ಕದ ಮನೇಲಿ ಪ್ಲೇಗಿಲಿ ಬಿತ್ತೋ ಏನೋ ಅಂತ ನಮ್ಮನೇಗೆ ಒಬ್ಬ ವಲಲ ವೈದ್ಯ ಅವನ ಜತೆಯಲ್ಲಿ ಒಬ್ಬ ಸೈರಂಧ್ರಿ, ಇಬ್ಬರೂ ನಮ್ಮನೆಗೆ ಬಂದರು. ಮುಂಜಾಗ್ರತೆಗಾಗಿ ಇನಾಕ್ಯುಲೇಷನ್ ಅಂದರು. ನನಗೇನೂ ಬೇಡ. ಪ್ಲೇಗಿಗಿಂತ ಭಾರಿ ಖಾಯಿಲೆ ಆಗಲೇ ಬಂದಿದೆ. ಅಂತ ವರಮಾನ ತೆರಿಗೆ ನೋಟೀಸುಕೂಡ ತೋರಿಸಿದೆ. ಸೈರಂಧ್ರಿ ಒಳುಕುತ್ತಾ ನನ್ನ ಬಳಿಗೆ ಬಂದಳು. ನನ್ನ ಶಪಥ ಮಾಯವಾಯ್ತು. ಕೈ ನೀಡಿದೆ ಅವಳ ಕೈ ಹಿಡಿಯಲು, ಕೈ ಬಿಟ್ಟು ಅವಳು ಕೋಮಲವಾದ ಕರಗಳಿಂದ ನನ್ನ ಎಡ ತೋಳು ಹಿಡಿದಳು. ಕರಗಳೇನೋ ಕೋಮಲ ಆದರೆ ಹಿಡಿತಮಾತ್ರ ಗೋರಿಲ್ಲಾ ಹಿಡಿತ. ಆ ವಲಲ ವೈದ್ಯ ಇನ್ಯಾಕ್ಯುಲೇಷನ್ ಮಾಡಿದ. ಅವರಿಬ್ಬರೂ ಹೊರಟುಹೋದರು.

ಇನಾಕ್ಯುಲೇಷನ್ ನೋವೇನೂ ಇಲ್ಲ, ಆದರೆ ಆ ಹಿಡಿತದ ನೋವು ಇನ್ನು ಉಬ್ಬುತ್ತಿದೆ ಕಣಯ್ಯಾ! ಆದಕ್ಕೇ ಕೀಚಕನಹಾಗೆ ತೋಳು ತೋಳು ಹಿಸುಕು ತ್ತಿದ್ದೇನೆ ಅಂದ.

* * *

ಗಂಧದ ವಾಸನೆ. ರಂಗಿನ ಬಟನ್ ಹೋಲ್, ಸರಿಗೆ ರುಮಾಲು, ಕೊರವನ ಅಲಂಕಾರ ಆ ಸಾಯಂಕಾಲ.

ಒಂದು ಹುಬ್ಬು ಹಾರಿಸಿದೆ. ಅವನಕಡೆಗೆ ಏನು? ಅಂತ ಕಣ್ಸನ್ನೆ ಮಾಡಿ.

'ಇವತ್ತು ಕಂಪನಿ ಮೀಟಿಂಗು, ನಾನೇ ಅಧ್ಯಕ್ಷ' ಅಂದ

'ಟೋಪಿ ಇಲ್ಲ, ಸರಿಗೆ ರುಮಾಲು, ಹಣವಂತ, ಜೈಲುಕಾಣೆ' ನಿನಗೆ ಹೇಗೆ ಅಧ್ಯಕ್ಷತನ ಸಿಕ್ಕಿತು. ಯಾವ ಕಂಪೆನಿ' ಎಂದೆ.

'ಅ. ಭಾ. ಸ. ಸಾ. ಕಂಪೆನಿ ಅಧ್ಯಕ್ಷ ನಾನು, ಎಂದ ನನ್ನ ಮುಖ ನೋಡಿ ವಿಶದೀಕರಿಸಿದ —ಅಖಿಲ ಭಾರತ ಸರಸ ಸಭೆಯ ನಾಟಕ ಕಂಪೆನಿಯ ಅಧ್ಯಕ್ಷ—ಅಂತ.

* * *

ಕೈ ಕೊಡವಿಕೊಳ್ಳುತ್ತಾ ಬಂದ ಕೊರವ ಕ್ಲಬ್ಬಿನೊಳಕ್ಕೆ—ಹದವಾದ ಮಳೆ ಬಿದ್ದ ಸಂಧ್ಯಾಕಾಲ— ಕೈ ಕೈ ಹಿಸುಕಿ ಬಿಸಿ ಮಾಡಬೇಕಾದ ಕಾಲ. ಅಂತಹ ಕಾಲದಲ್ಲಿ ಕೈ ಝಾಡಿಸುತ್ತಾ ಬಂದು ನಿಂತ ಕೊರವ.

ನನ್ನ ಹಣೆಯಮೇಲಿನ ವಿಭೂತಿ ಪಟ್ಟೆ ಇವನನ್ನು ನೋಡಿ ಬರಿ ಬರಿ ಯಾಯ್ತು.

'ಈ ಶಾಲಾ ಮಾಸ್ತರುಗಳನ್ನೆಲ್ಲಾ ಕೊರೀಯಾಕ್ಕೆ ಕಳಿಸಬೇಕು' ಎಂದ.

ಕೊರವನ ಮಾತೇ ಹೀಗೆ. ಹತ್ತು ಕಡಕಿನ ಮಾವ ಹತ್ತನೇ ಅಳಿಯನ್ನ ಮಾತನಾಡಿಸುವಹಾಗೆ, ಗಭೀರಾರ್ಥದ ಮಾತು.

'ಹಾಗಂದರೆ' ಎಂದೆ ಅರಿಯದೆ.

ಸಾಯಂಕಾಲ ನಾಲ್ಕು ಗಂಟೆ ಸಮಯ. ಶಾಲೆ ರಸ್ತೇಲಿ ಬರ್ತಾ ಇದ್ದೆ. ಒಬ್ಬ ಹುಡುಗ ಅಳುತ್ತಾ ಇದ್ದ. ಯಾಕೋ ಕರುಳು ಕಿವಿಚಿದಹಾಗಾಯ್ತು. 'ಯಾಕೋ!' ಅಂತ ಕೇಳಿದೆ. "ಮಾಸ್ತರು ಜಿರಾಫೆ ಮೇಲೆ ಪಾಠ ಹೇಳ್ತಾ ಇದ್ದರು. ನಾನು ನಕ್ಕೆ ಮಾಸ್ತರು ಕೆನ್ನೆಗೆ ಎರಡು ಕೊಟ್ಟು ಹೊರಕ್ಕೆ ಕಳಿಸಿದರು" ಅಂತ ಬಿಕ್ಕಿ ಬಿಕ್ಕಿ ಎಳೆ ಹುಡುಗ ಹೇಳಿದ.

ಶಾಲೆ ಒಳಕ್ಕೆ ಹೋದೆ. ಯಾರು ಇಂತಹ ಕಟುಕ ಮಾಸ್ತರು ಅಂತ ನೋಡೋಣ ಅಂತ. ಸಣಕಲ ಸ್ಯಾಂಡೋ ಒಬ್ಬನನ್ನ ನೋಡಿದೆ—ಅವನೇ ಅವನು ಅಂತ ಕೂಡಲೇ ಗೊತ್ತಾಯ್ತು. ಈ ಲಂಬಗ್ರೀವನೇ ಜಿರಾಫೆ ಪಾಠ ಹೇಳಿರಬೇಕು. ಅರಿತೆ. ಹುಡುಗ ಏಕೆ ನಕ್ಕ ಎಂಬುವುದು ಆಗ ತಿಳಿಯಿತು. ಅವನು ಮಾತನಾಡಿದಾಗ ಜಿರಾಫೆ ಗಂಟಲಿನಂತೆ ಇವನ ಕತ್ತಿನ ಗೋಮಾಳೆ ಆರಂಗಲ ಏರಿಳಿಯುತ್ತಿತ್ತು ತಡೆಯಲಾರದೆ ನಾನೂ ನಕ್ಕೆ. ಜಿರಾಫೆ ಮಾಸ್ತರು ಹತ್ತಿರಕ್ಕೆ ಬಂದ ಹೆದರಿಸುವ ಮುಖವಾಡ ಧರಿಸಿ.

ನನ್ನ ತೋಳ್ಬಲ ಗೊತ್ತಲ್ಲಾ. ಮೊಳಕೈಯಿಂದ ತೆಂಗಿನಕಾಯಿ ಒಡೆಯ ಬಲ್ಲೆ. ಜಿರಾಫೆ ಮಾಸ್ತರಿಗೆ ಎರಡು ಮಡಗಿದೆ. ಅವನು ಉಸಿರಾಂತನಾದಂತಿದ್ದ. ಅವನ ಬೆವರನ್ನು ಕೊಡವಿಕೊಂಡೇ ಕ್ಲಬ್ಬಿಗೆ ಬಂದೆ.

ಅದಕ್ಕೇ ಹೇಳಿದ್ದು. "ಈ ಶಾಲಾ ಮಾಸ್ತರುಗಳನ್ನೆಲ್ಲಾ ಖಂಡಿತ ಕೊರೀಯಾಕ್ಕೆ ಕಳಿಸಬೇಕು ಅಂತ" ಅಂದ.

ನನ್ನ ವಿಭೂತಿ ಪಟ್ಟೆ ತಿರುಗಿ ಪಟ್ಟೆ ಪಟ್ಟೆಯಾಯ್ತು!

ಬನ್ನಿ ! ಬನ್ನಿ !!

ಬರೀತಲೆ ಏಕೆ ಕೆರೆಯುತ್ತೀರಿ !

ಕೂದಲಿದ್ದ ತಲೆ ಕೆರೆದರೆ ಹಿತವಾಗುತ್ತೇ ! ಮನಸ್ಸು ಮಿಂಚುತ್ತೆ !

ತಲೇಲಿ ಕೂದಲು ಬೆಳೆಯಬೇಕಾದರೆ, ಇಲ್ಲಿ ಬನ್ನಿ. ಇಲ್ಲಿ ಬನ್ನಿ. ಅಂತ ಆ ಮೂರು ಕಟ್ಟೆಯ ಚೌಕದಲ್ಲಿ. ಪೊದೆ ಗುಂಗುರು ಕೂದಲಿನವ ಕೂಗುತ್ತಿದ್ದ. ಬಸ್ಸಿಗಾಗಿ ನಾನು ಅಲ್ಲೇ ಕಾದು, ಏನೂಮಾಡಲೂ ತೋರದೆ ಭಟ್ಟತಲೆ ಕೆರೆದು ಕೊಳ್ಳುತ್ತಿದ್ದೆ. ನನ್ನನ್ನು ನೋಡೇ ಹೀಗೆ ಕೂಗಿದನೋ ಅಂತ ಅನುಮಾನ ಆಯಿತು. ಆದರೂ ಇವನೇನು ಮಾಡ್ತಾನೋ ಅಂತ ಅವನ ಹತ್ತಿರಹೋದೆ.

ಜಾಂಬವಂತನ ಗೋತ್ರದ ಗುರುವಂತೆ ಅವನಿಗೆ—ಗುರು ಹೇಳಿಕೊಟ್ಟ ವಿದ್ಯೆ ಮಾತ್ರ ಗೊತ್ತಂತೆ. ಅದು ಭಟ್ಟ ತಲೆಯಲ್ಲಿ ಪೊದರು ಪೊದರಾಗಿ ಕೂದಲು ಬೆಳೆಸುವ ವಿಧಾನವಂತೆ. ಅವನ ಗುರುಗಳು ಕರಡಿಗಳ ಭಾಷೆ ಕಲಿತು ಕರಡಿಗಳೊಡನೆ ಕಾಡಿನ ಶಾಲೆಯಲ್ಲಿ ಕಲಿತು ಈ ರಹಸ್ಯ ಕಂಡುಹಿಡಿ ದಿದ್ದರಂತೆ. ಹಲಸಿನ ತೊಳೆಯನ್ನು ಜೇನುತುಪ್ಪದಲ್ಲಿ ಮೂರುದಿನ ನೆನೆಹಾಕಿ, ಅದಕ್ಕೆ ಕಾಲು ತೊಲ ಇರುವೆ, ಕಟ್ಟಿರುವೆ ಅಂದರೆ ಎಂಟನೇ ಒಂದು ತೊಲ, ಇದರ ಸಾರವನ್ನು ಸೇರಿಸಿ, ಮೂರು ದಿನ ಚೆನ್ನಾಗಿ ಅದನ್ನು ಕೈಯಾಡಿಸಿ ನಂತರ ಅದರಲ್ಲಿ ಲೇಹ ಮಾಡಬೇಕಂತೆ. ಆ ಲೇಹವನ್ನು ಒಂದು ನಿಂಬೆ ಹಣ್ಣಿನಗಾತ್ರ ದಿನಾಲೂ ಮೂರುಸಾರಿ ತಿಂದು, ತಿಂದ ಮೇಲೆ ಕೈಗಳನ್ನು ತೊಳೆ ಯದೆ, ಅದೇ ಕೈಯಲ್ಲಿ ತಲೆಯ ಮೇಲೆ ಬೆರಳಾಡಿಸಬೇಕಂತೆ. ಇಷ್ಟ ಗುರುವಿನ ಧ್ಯಾನಮಾಡುತ್ತಾ—ಅವನ ತಲೆ ಕೂದಲು ಬೆಳೆದುದಕ್ಕೆ ಅದೇ ಲೇಹವೇ ಕಾರಣವಂತೆ.

ಒಂದು ಮಂಡಲದಲ್ಲಿ ಆಯುಷ್ಕರ್ಮ ಶಾಲೆಗೆ ದಿನಕ್ಕೆ ಎರಡುಬಾರಿ ಹೋಗುವಂತಾಗುತ್ತದಂತೆ.

ಇಷ್ಟು ಕತೇನು ಹೇಳಿ, ಬಂದು ನಿಂತು ಕೇಳಿದ ಬಕರಾಗಳಲ್ಲಿ ಮೂವರು ಥಡಿಯರಿಗೆ ಮೂರು ದೊನ್ನೆ ಹಲ್ವಾ ಮಾರಿದ, ಮೂರು ರೂಪಾಯಿ ದೊನ್ನೆ ಒಂದರ ಹಾಗೆ.

ಈ ವೇಳೆಗೆ ಬಸ್ಸಿನವೇಳೆ ಆಗಿಹೋಗಿತ್ತು. ನಡೆದೇ ಹೋಗೋಣ ಅಂತ ನಡೆದೇ ಹೊರಟೆ. ನಮ್ಮ ವಠಾರದ ಹತ್ತಿರ ಹೋದಾಗ ಅಲ್ಲಿಗೆ ಬಸ್ಸೊಂದು ಬಂದು ನಿಂತಿತು. ಅದರಿಂದ ಇಳಿದ ನಮ್ಮ ಮೂರುಕಟ್ಟೆಯ ರೋಮವೈದ್ಯ.

ನನ್ನನ್ನು ನೋಡಿ, ಗುರ್ತುಹಿಡಿದು, ಬಲು ಶಕೆ ಅಲ್ಲವೇ! ರಾಯರೇ. ಬಸ್ಸಿನಲ್ಲಿ ಬಲು ಕಾವು ಎಂದು ಹೇಳಿ. ತಲೆ ಮೇಲಿನ ಕೂದಲು ಪೊದರು ಪೊದರನ್ನೇ ತೆಗೆದು ಎಡಗೈಲಿ ಹಿಡಿದ. ಬೆವರುತ್ತಿದ್ದ ಭಟ್ಟ ತಲೆಯನ್ನು ಹೆಗಲ ಮೇಲಿನ ಟವಲಿಂದ ಹಿತವಾಗಿ ವರೆಸಿಕೊಂಡ.

—ಪ್ರಸಾದ್.

ವೈಜ್ಞಾನಿಕ ವಿಜ್ಞಾನ

ವೈಜ್ಞಾನಿಕರೇ ಇಂದಿನ ಜಗತ್ತಿನ ಮಹರ್ಷಿಗಳು; ಜ್ಞಾನ ಚೂಡಾಮಣಿಗಳು; ಪಂಡಿತಾಗ್ರೇಸರು; ಮೇಲುಮಟ್ಟದ ಮೇಧಾವಿಗಳು; ಸಕಲಲೋಕ ಸರ್ವಜ್ಞರು! ಅವರ ಮೆದುಳಿನಷ್ಟು ಹದುಳವಾದದ್ದೊಂದು ಬೇರಿಲ್ಲ, ಎಂಬ ಸಿದ್ಧಾಂತ, ಸರಿಯೋ ತಪ್ಪೋ, ಎಂಬುದನ್ನು ವೈಜ್ಞಾನಿಕ ದೃಷ್ಟಿಯಿಂದಲೇ ನಾನು ಈಚೆಗೆ ಸಂಶೋಧಿಸಿದೆ. ಅಂಕಿ ಅಂಶಗಳೊಡನೆ ಲೆಕ್ಕಾಚಾರವಾಗಿ ತೂಗಿ ಅಳೆದು ನಿರ್ಧರಿಸಿದೆ. ಈ ನನ್ನ ಅಮೂಲ್ಯ ಸಂಶೋಧನೆಯ ಸಾರವೇ ಕೆಳಗಿನ ಲೇಖನ. ನಾನು ನಡೆಸಿದ ಮುಖ್ಯವಾದ ಎಕ್ಸ್‌ಪೆರಿಮೆಂಟುಗಳನ್ನೂ ಅವುಗಳ ಫಲಿತಾಂಶವನ್ನೂ ಮಾತ್ರ ಇಲ್ಲಿ ಸ್ಥೂಲವಾಗಿ ಕೊಟ್ಟಿದೆ:—

೧) ೮೪ ವೈಜ್ಞಾನಿಕರಿಗೆ ಕೈಗಡಿಯಾರಗಳನ್ನು ಕೊಡಲಾಯಿತು. ಐದು ವಾರದನಂತರ ಪರೀಕ್ಷಿಸಲಾಗಿ, ೨೦ ವಿದ್ವಾಂಸರು ಅವನ್ನು ಕಳೆದುಕೊಂಡು ಕೂತಿದ್ದರು, ೧೫ ಜನ ಅವನ್ನು ರಿಪೇರಿಗೆ ಕೊಟ್ಟಿದ್ದರು (ಕೀ ಕೊಡದೆ ಅವು ನಿಂತಿದ್ದುವು, ಅಷ್ಟೆ!) ೧೪ ಜನ ಅವನ್ನು ತಮ್ಮ ಪತ್ನಿಯರಿಗೆ ದಾನಮಾಡಿದ್ದರು (ಅವರಿಂದ ತಾವು ಅವನ್ನು ಪಡೆದಿದ್ದೆವು ಎಂಬ ಭ್ರಮೆಯಿಂದ) ೪೨ ಜನ ಅವನ್ನು ನೀರಿಗೋ ದ್ರಾವಕಕ್ಕೋ ಹಾಕಿ ಬೇಯಿಸಿದ್ದರು (ಇತರೇ ಪದಾರ್ಥಗಳನ್ನು ಬೇಯಿಸಿ ನೋಡುವ ಅಭ್ಯಾಸ ಬಲದಿಂದ)

೨) ಒಮ್ಮೆ ೯೨ ವೈಜ್ಞಾನಿಕರುಗಳನ್ನು ಬೆಳಗ್ಗೆ ಬೆಂಗಳೂರು ಸ್ಟೇಷನಿಗೆ ಕರೆದುಕೊಂಡು ಹೋಗಿ, ಪ್ಲಾಟ್‌ಫಾರಂನಲ್ಲಿ ನಿಲ್ಲಿಸಿ, ಮೈಸೂರು ರೈಲು ಹತ್ತಿ, ಅಲ್ಲಿಗೆ ಹೋಗೋಣ, ಎಂದು ಹೇಳಲಾಯಿತು. ಅವರ ಪೈಕಿ ೩೦ ವೈಜ್ಞಾನಿಕರುಗಳು ಮದರಾಸ್ ಗಾಡಿಯನ್ನೂ, ೨೬ ವೈಜ್ಞಾನಿಕರುಗಳು ಚಿಕ್ಕಬಳ್ಳಾಪುರದ ಗಾಡಿಯನ್ನೂ, ೨೧ ಜನ ಗುಂತಕಲ್ಲಿನ ಗಾಡಿಯನ್ನೂ, ಉಳಿದವರು ಹುಬ್ಬಳ್ಳಿ ರೈಲನ್ನೂ ಹತ್ತಿ, ಆಯಾ ರೈಲುದಾರಿಯ ತುತ್ತ ತುದಿ ಸ್ಟೇಷನ್ನು ತಲಪಿದರು.

೩) "ನಿಮ್ಮ ನಿಮ್ಮ ಅಂಗಿ ಜೋಬುಗಳಲ್ಲಿ ಯಾವ ಯಾವ ಪದಾರ್ಥಗಳಿವೆ, ಹೇಳಿ," ನೀವು ನೋಡಿದ ಒಂದು ಸಿನಿಮದ ಕಥೆಯನ್ನು ಸಂಗ್ರಹವಾಗಿ

ಹೇಳಿ", "ನಿಮ್ಮ ಪತ್ನಿಯರ ಹೆಸರನ್ನು ಬರೆಯಿರಿ"— ಈ ಮೂರು ಪ್ರಶ್ನೆಗಳನ್ನು ೨೧೨ ವೈಜ್ಞಾನಿಕ ಮಹಾಶಯರಿಗೆ ಹಾಕಲಾಯಿತು. ೮೮ ವೈಜ್ಞಾನಿಕರುಗಳಿಗೆ ಮೂರು ಪ್ರಶ್ನೆಗಳಿಗೂ ಉತ್ತರ ತೋರಲಿಲ್ಲ; ೨೩ ವೈಜ್ಞಾನಿಕರುಗಳು ಮೂರನೆಯ ಪ್ರಶ್ನೆಗೆ ತಪ್ಪು ಉತ್ತರವನ್ನು ಹೇಳಿದರು. ಹೈಸ್ಕೂಲ್ ವಿದ್ಯಾರ್ಥಿಗಳೂ ಕೂಡ ೧೦೦ಕ್ಕೆ ೧೦೦ ನಂಬರ್ ಸಂಪಾದಿಸುವ ಎರಡನೆಯ ಪ್ರಶ್ನೆಗೆ ೨೦೮ ವೈಜ್ಞಾನಿಕರುಗಳು ಸೊನ್ನೆಗಳಿಸಿದರು.

೪) ಹಾಸ್ಯ ತುಂಬಿ ತುಳುಕುತ್ತಿದ್ದ ಒಂದು ಕಥೆಯನ್ನು ೭೫ ವೈಜ್ಞಾನಿಕರುಗಳೆದುರು ಓದಲಾಯಿತು. ಆಗ, ೧೩ ಜನ ನಿದ್ದೆ ಹೋದರು, ೨೨ ಜನ ವೈಜ್ಞಾನಿಕರುಗಳು ಆಕಳಿಸಿ ಆಕಳಿಸಿ ಬಾಯಿ ಮುಚ್ಚದಂತಾದರು, ಇಬ್ಬರು ಅತ್ತೇಬಿಟ್ಟರು.

೫) ಇಪ್ಪತ್ತೈದು ನಿಮಿಷ ಕಾಲಾವಕಾಶಕೊಟ್ಟು ಡ್ರೆಸ್‌ಮಾಡಿಕೊಂಡು ಹೊರಗೆ ಬರುವಂತೆ ೬೪ ವೈಜ್ಞಾನಿಕ ಮಹನೀಯರಿಗೆ ಆಜ್ಞೆಮಾಡಲಾಯಿತು. ಅವರ ಪೈಕಿ ೧೮ ಜನ ಕನ್ನಡಕವನ್ನು ಮರೆತು ಹೊಸಲಲ್ಲೇ ಎಡವಿಬಿದ್ದರು; ಒಂದೇ ಕಾಲಿಗೆ ಪಾದರಕ್ಷೆ ಧರಿಸಿದವರು ೫೮ ಮಂದಿ; ೩ ಜನ ಡ್ರೆಸ್ ಮಾಡಿಕೊಳ್ಳುವ ಬದಲು ಇನ್ನೊಂದು ಮಾಡಿ ಹೊರ ಬಂದದ್ದರಿಂದ ಅವರನ್ನು ಪೋಲೀಸರಿಗೆ ಒಪ್ಪಿಸಬೇಕಾಗಿಬಂತು

ಇಂಥ ಸಂಶೋಧನೆಗಳಿಂದ ಬಂದಿರುವ ಸಿದ್ಧಾಂತವನ್ನು ಪುಸ್ತಕ ರೂಪವಾಗಿ ನಾನು ತರುವ ಮೊದಲು ಇತರರೂ ತಮಗೆ ಪರಿಚಿತರಾದ ವೈಜ್ಞಾನಿಕರ ಮನೋಗತಿ ಬುದ್ಧಿವಂತಿಕೆಗಳನ್ನು ಇದೇ ತೆರನ ಸಂಶೋಧನೆಗಳಿಂದ ಅಳೆದು ನನಗೆ ತಿಳಿಸಬೇಕೆಂದು ಈ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.

— ಗಂಗಾಧರ.

ಹೋದ ಶತಮಾನದ ಕೆಲವು ವೃತ್ತಾಂತ ಪತ್ರಿಕೆಗಳು ಕೆಲವು ವಿಷಯುಗಳಿಗೆ ಬೇಕಾಗಿವೆಯಾದುದರಿಂದ ಅದನ್ನು ಕೆಲವರು ಕಷ್ಟದಿಂದ ಹುಡುಕುತ್ತಿದ್ದಾರೆ ಎಂದು ತಿಳಿದು ಬಂದಿದೆ (ವರ್ತಮಾನ)

—ಅಷ್ಟೇಕೆ ಕಷ್ಟ? ನಮ್ಮಊರಿನ ರೀಡಿಂಗ್ ರೂಂ ಮೇಜಿನಮೇಲೆ ಬೇಕಾದಷ್ಟು ಸಿಗುತ್ತಿವೆಯಲ್ಲಾ.

—ಕೆ. ಬಿ. ಶ್ರೀ.

★ ನೀತಿಯ ಕತೆಗಳು ★

(ಬಲಿತವರಿಗೆ)

ಒಂದೂರಿನ ಹತ್ತಿರ ಒಂದು ನರಿಯಿತ್ತಂತೆ. ಆ ನರೀಗೆ ದ್ರಾಕ್ಷಿ ಅಂದರೆ ಬಾಯಲ್ಲಿ ನೀರೂರೋದಂತೆ. ಅದಕ್ಕೇ ಮನುಷ್ಯರಲ್ಲಿ ಗಾದೆ ಇರೋದು "ನರೀ ಮುಖ ನೋಡಿ ಎದ್ದವನಿಗೆ ದ್ರಾಕ್ಷಿರಸ ಸಿಕ್ಕಿದಹಾಗೇನೇ" ಅಂತ.

ಒಂದು ದಿವಸ ಈ ನರಿ ಏನು ಮಾಡ್ತಂತೆ? ಊರಂಚಿನಲ್ಲಿದ್ದ ದ್ರಾಕ್ಷಿ ತೋಟಕ್ಕೆ ಹೋಯ್ತಂತೆ. ಚಪ್ಪರದಮೇಲೆ ದ್ರಾಕ್ಷಿ ಗೊಂಚಲುಗಳಿದ್ದುವಂತೆ. ನೋಡುಕ್ಕೇನೋ ಚನ್ನಾಗಿದ್ದರೂ, ಇನ್ನೂ ಒಂದು ಹದ ಮಳೇನೂ ಬಿದ್ದಿಲ್ಲ ಆದ್ದರಿಂದ ಹಣ್ಣು ಹುಳಿ ಇರಬಹುದು, ಮಾದರೀಗೆ ಒಂದು ಹಣ್ಣು ಅಜಮಾಯಿಷಿ ಮಾಡೋಣ ಅಂತ ಈ ಜಾಣನರಿ ಚಪ್ಪರಕ್ಕೆ ಹಾಕಿದ್ದ ಬೊಂಬನ್ನು ಒದೆಯಿತಂತೆ ಆಗ ಗೊಂಚಲಿಂದ ಒಂದೆರಡು ಹಣ್ಣು ಕೆಳಕ್ಕೆ ಬಿದ್ದಿತಂತೆ ಅದನ್ನು ಹಲ್ಲಿನಲ್ಲಿ ಕಡಿಯೋ ಹೊತ್ತಿಗೆ ಹಲ್ಲೆಲ್ಲಾ ಝುಂ ಅಂತಂತೆ. ಬೇಗ ಮಿಕ್ಕಿದ್ದನ್ನು ಉಗುಳಿ ನರಿ ವಾಪಸು ಹೋಗ್ತಾ ಇತ್ತಂತೆ—ದ್ರಾಕ್ಷಿ ಇನ್ನೂ ತುಂಬಾ ಹುಳಿ ಅಂತ.

ಆಗ ದಾರೀಲಿ ಇಸೋಪ್ ಅಂತ ಒಬ್ಬ ಹಳ್ಳಿಯೋನು ಸಿಕ್ಕಿದನಂತೆ. ಅವನೂ ದ್ರಾಕ್ಷಿ ತೋಟಕ್ಕೆ ಹೋಗಿ ಹಣ್ಣು ಕದ್ದು ತಿನ್ನಬೇಕು ಅಂತ ಯೋಚನೆ ಮಾಡ್ತಾ ಇದ್ದನಂತೆ. ಈ ನರಿ ಸಿಕ್ಕಾಗ 'ನಮಸ್ಕಾರ ನರಿಯಣ್ಣಾ! ದ್ರಾಕ್ಷಿ ತಿಂದೆಯಾ, ಎಂದು ಕೇಳಿದನಂತೆ ಆಗ ನರಿ ಹೇಳಿತಂತೆ. 'ಇಲ್ಲಾ! ಇಸಾಪಣ್ಣ ದ್ರಾಕ್ಷಿ ತುಂಬಾ ಹುಳಿ' ಅಂತ. ಇಸೋಪನು ನಕ್ಕು ಹೇಳಿದನಂತೆ "ಅಲ್ಲಾ! ನರಿಯಣ್ಣಾ, ನಿನಗೆ ದ್ರಾಕ್ಷಿಗೊಂಚಲು ಎಟುಕಲಿಲ್ಲ ಅದಕ್ಕೇ ಹಣ್ಣು ಹುಳಿಅಂತೀಯಲ್ಲಾ" ಅಂತ.

ನರೀಗೆ ಕೋಪ ಬಂದು ಇಂತಹವನಿಗೆ ಬುದ್ಧಿ ಹೇಳಬಾರದು, ಅಂತ, ಮರುಮಾತಾಡದೆ ಹೊರಟುಹೋಯ್ತಂತೆ. ಇಸೋಪನು ಆ ದ್ರಾಕ್ಷಿಯನ್ನು ತಿಂದು ಗಂಟಲು ಕಟ್ಟಿಕೊಂಡು ಮಾರನೆ ದಿನ ಶೀತಜ್ವರ ಬಂದು. ಅದು ವಿಷಮಶೀತಕ್ಕೆ ತಿರುಗಿ ಮೂರನೆಯ ದಿನ ಹರೋಹರ! ಅಂದನಂತೆ.

ಪತ್ರಿಕೆಯಲ್ಲಿ ಈ ಸುದ್ದಿಯನ್ನು ಓದಿದಾಗ ನರಿ ಹೇಳ್ತಂತೆ "ನೀತಿ ಹೇಳುಕ್ಕೆ ನರಿ ಇದ್ದರೂ ನೀತಿ ಕೇಳೋ ನರ ಇರಬೇಕಲ್ಲಾ!" ಅಂತ.

—o—

ನಮ್ ಟ್ರಿಪ್ಪು

ನಮ್ದು, ಮೇಲ್ಗಡಿ ಮಹಿಳಾ ಸಂಘ;
ನಮ್ಮಯ ಆಟದ ಕೂಟದ ರಂಗ,
ಮೇಲ್ಗಡಿ ಮಹಿಳಾ ಸಂಘ!

"ಗೊಂದೀ ಗುಡ್ಡಕೆ ಟ್ರಿಪ್ಪು,
ಯಾರ್‍ಯಾರಿಗೆ ಒಪ್ಪು?"
ಕೇಳಿದರು ಸೆಕ್ರೆಟ್ರಿ,
"ಬರೋರೆಲ್ಲಾ ದುಡ್ಕಟ್ರಿ!"

"ನಾಬಂದೆ. ನಾಸಿದ್ಧ. ನಾಹೊರ್‍ಟೆ, ನಾರೆಡಿ!"
ಪ್ರೇಮ, ಪದ್ಮ, ಸುಧಾ, ಸೀತಾ,
ನಾಗೂಬಾಯಿ, ಭಾಗೂಬಾಯಿ,
ತಾರಾದೇವಿ, ಹೀರಾದೇವಿ,
ವೆಂಕಮ್ಮ, ಬಿಂಕಮ್ಮ, ಶೆಂಗಮ್ಮ, ಶಾಮಳಮ್ಮ!

ಕುಂಬ್ಳೂರ್ ಟ್ರಾನ್ಸ್‌ಪೋರ್ಟ್ ಕಂಪ್ನಿ,
ಒದಗಿಸ್ತು ಭರ್ಜರಿ (ಬಸ್ಸು)—ಲಂಪ್ನಿ!
ತುಂಬಿದ್ರೆಲ್ಲಾ ಅವಳ್ಹೊಟ್ಟೇಲಿ,
ಏರಿದರು ಗುಡ್ಡಾ ಜಬರ್ದಸ್ತೀಲಿ!

ತೋಟ, ತಪ್ಪಲು, ತಿರುಗಿದ್ದಾಯ್ತು!
ಹೋಳಿಗೆ ಯೂಟ ಹೊಡೆದದ್ದಾಯ್ತು!
ಆಟ, ಪಾಟ, ಹಾಡು, ಹರಟೆ, ಹಾಸ್ಯ,
ಟಿಫನ್, ಟೀ, ಮೇಲ್ದಾಣ್ಣಿನ ಲಾಸ್ಯ!

ಹೊರಟನು ಮನೆಗೇ ದಿನಕರನಾಗ,
ಕಟ್ಟಿತು ಕಾಮಿನಿ ತಂಡ ಗಂಟನ್ನಾಗ,
ತಯಾರಿ ಸೇರಲು ತಂತಂ ಗೂಡನು ಬೇಗ,
ಆದ್ರೆ—ಪರಾರಿ ಬಸ್ಸು ನೋಡಲು ಹೋಗ!

"ಗತಿಯೇನ್ಗಂಡಂದು !" ಅತ್ತಳು ಅಹಲ್ಯ,
"ಕೊರಗೆಷ್ಟ್ ನನ್ನೋರಿಗೆ !" ಕುದಿದಳು ಕಮಲೆ,
"ತಾಳಲಾರ ನನ್ನಿನಿಯ !" ತಪಿಸಿದಳು ತಾರಾ,
"ಬಾಳಲಾರ್ರು ನನ್ಕಂದಮ್ಮಗಳು !" ಬಳಲಿದಳು ಭಾಗೂ.

"ಹಾಬಸ್ಸೇ, ಕಠೋರ ಹೃದಯೋ,
ಹಾನಿಹೊಂದಿದೆಯೋ !" ಹಾಡಿದಳು ಶಿಲ್ಲ.
ಹಾಯ್ ! ಹಾನಿಹೊಂದಿದೆಯೋ !" ದನಿಗೂಡಿದರೆಲ್ಲ !

ಬಿರುಗಣ್ ಬಿಟ್ಕೊಂಡು,
ಅಳುಮೂತಿ ಮಾಡ್ಕೊಂಡು,
ಬೆಳಗ್ಗಂಡ್ರು ಭವಣೇಲಿ,
ಗೊಂದೀಗುಡ್ಡದ ಬಂಗ್ಲೇಲಿ !

ಕುಂಬ್ಳೂರು ಟ್ರಾನ್ಸ್ಪೋರ್ಟ್ ಕಂಪ್ನಿ,
ಕಳ್ಸಿತ್ತು ಬದ್ಲೀ (ಬಸ್ಸು)—ಲಂಪ್ನಿ !
"ಗೆದ್ವೊ, ಗೆದ್ವು !" ಕುಣಿದರು ಖಿಣ್ ಖಿಣಿ !

ಊರ್ಧ್ವತ್ತಿರ್ಬ್ಯಾಯ್ತು !
ಪುಕ್ಕಲ್ ಪೂರಾ ಹೆಚ್ಬ್ಯಾಯ್ತು !
ದುಃಖಧಾರಾಪೂರ್ಬ್ಯಾಯ್ತು !
ಅರ್ಧಾಂಗನ್ನಾಲೋಚ್ನೆ ಅರ್ಧಾಂಗೀರಿಗ್ಬಲ್ಯಾಯ್ತು !

(ಮೇಲ್ಗಡಿ ಮಹಿಳಾ ಸಂಘದ
ಮಾನಿನಿಯರ್ ಮನೆಗ್ಹೋದಾಗ) :—

"ಅಯ್ಯೋ ಬಂದೇ ಬಿಟ್ಯಾ !"
ಅಳಲಿದ ಅಹಲ್ಯಾ ನಾಥ;
ಬೆಳ್ಳುಳ್ಳಿ ಬೇಯಿಸ್ಕೋತಿದ್ದ
ಅಪ್ಪಿಲ್ಲ ದಾಂಗ !

"ಅಪ್ಪಾ !—ಅಪ್ಪಾ, ಅಮ್ಮ್ಮ್ಮಾ !"
ಚೀರಿದ್ವು ಚಂದ್ರಳ ಮಕ್ಳು
(ಭೂತವ ಕಂಡಂತೆ ಬೆದರಿದ್ವು)
'ಹಾ !' ಹೊರಟಿತು ಹಾಹಾಕಾರ ಅಡುಗೇಮನೆಯಿಂದ !


ಕೂಟು, ಕೋಸಂಬ್ರಿ, ಕೋಸುಪಲ್ಯ,
ಹಪ್ಪಳ, ಸಂಡಿಗೆ, ಬಾಳಕ
ಸಕ್ಕರೆ ಪೊಂಗಲು—ರಾಯರ ಪಾಕ!
(ರೇಷನ್ ಸಕ್ಕರೆ ಮುಕ್ಕಾಲ್ಮಾಯು!)

"ನೀ ಕೊಡೋದೊಂದೇ ದೋಚಿ,
ಅಪ್ಪಾನೇ ಜಾನ, ಮೂರ್ಮೊರ್ದ್ದೋಚಿ!"
ಮೂದಲಿಸ್ತ್ತ ಕೈ ಮುಗು ಕಂಬ್ದಾಚಿ
"ಸಂಜೆಗೆ ಬರಲೆಂದು ಹಂಬಲಿಸಿದ್ವು"
ನಿಟ್ಟುಸಿರಿಟ್ಟನು ಹಿರಿಮಗನೀಚಿ!

"ಅಡಡೇ ವಂದುಟ್ಯೇ" ಒರಲಿದ ಶಿಂಗಮ್ಮನಾತ!
ದಟ್ಟೇ ಕಟ್ಕೊಂಡು,
ಹೊಟ್ಟೇ ಬಿಟ್ಕೊಂಡು,
ಹಿಟ್ಟೊಳಸ್ತಿದ್ದ ದೀರನಾತ!
(ಪಾಪ! ಹುಟ್ದಾಗಿಂದ ಹಿಡಿದ್ಕಟ!)

"ಆಯ್ಯೋ, ಅವಳೇ ಬಂದ್ಬಿಟ್ಳಲ್ಲಾ!"
ಬಿದ್ದನು ಮೂರ್ಛೆ ಗಂಗೂ ಗಂಡ
"ಗೊಂದೀ ಗುಡ್ಮದ ಸಂಧೀ ಪಾಲಾದ್ಯೆಂದು,
ಚೆಂದುಳ್ಳಿ ಹೆಣ್ಣಾನು ಬಯ್ಸಿದ್ದ ನಿನ್ನಿನಿಯು!"
ಎಂದು ಸುರಿದ, ಲಗ್ನ ಕಟ್ಟಿ ಪಾಯ್ಸ
ನೆಕ್ಕುತ್ತಿದ್ದ ಜೋಯ್ಸ!!

—ಟಿ. ಸುನಂದಮ್ಮ.



ನಪಾಸ್ ಲೆಕ್ಕ

ಈ ವರ್ಷದ ಪರೀಕ್ಷೆಗಳಲ್ಲಿ ನಪಾಸಾದವರ ಸಂಖ್ಯೆ ಎಂದಿನಂತೆ ಸಮರ್ಪಕ ವಾಗಿದೆ ಎಂದು ಅಧಿಕೃತ ವರ್ತಾರದಲ್ಲಿ ಹೇಳಲಾಗಿದೆ. ಪಠ್ಯಪುಸ್ತಕಗಳನ್ನು ಓದದೆ ಇದ್ದುದರಿಂದಾಗಲಿ, ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಬರೆಯದೆ ಇದ್ದುದರಿಂದಾಗಲಿ, ಯಾರೂ ನಪಾಸಾಗಲಿಲ್ಲವಂತೆ. ಫೈಲಾದವರ ಪೈಕಿ, ಈ ಕೆಳಗಿನ ಕಾರಣಗಳೇ ಅವರ ಫಲಿತಾಂಶಕ್ಕೆ ಕಾರಣ ಎಂದು ತಿಳಿದುಬಂದಿದೆ:

೧. ಉತ್ತರ ಪತ್ರಗಳನ್ನು ಓದಿ ತೂಗಿ ನಂಬರು ಕೊಟ್ಟವರ ಅಜ್ಞಾನ, ಅಸಮರ್ಥತೆಗಳಿಂದ ನಪಾಸಾದವರು—ಶೇಕಡ ೨೮

೨. ಪರೀಕ್ಷೆ ಕಾಲದಲ್ಲಿ ಜ್ವರ ತಗುಲಿ, ಚೇಳು ಕುಟುಕಿ, ವಾತಪಿತ್ತಗಳು ಪ್ರಕ್ಷೋಭಿಸಿ, ಆರೋಗ್ಯವನ್ನು ಕಳೆಕೊಂಡವರು—ಶೇಕಡ ೧೨.

೩. ಜಾತಕದಲ್ಲಿ ತಾರಾಬಲ ಚಂದ್ರಬಲ ಗ್ರಹಬಲ ಸಾಲದೆ ಬಂದುದರಿಂದ—ಶೇಕಡ ೮.

೪. ಪರೀಕ್ಷೆದಿನ ಮನೆಯಿಂದ ಹೊರಟಾಗ ಎದುರಿಗೆ ಕೆಟ್ಟ ಶಕುನ ಬಂದದ್ದರಿಂದ ನಪಾಸಾದವರು—ಶೇಕಡ ೬.

೫ ಬರೆದ ಉತ್ತರ ಸರಿಯಾಗಿದ್ದರೂ ಅದನ್ನು ಪರೀಕ್ಷಕರು ತಪ್ಪೆಂದು ತಿಳಿದದ್ದರಿಂದ—ಶೇಕಡ ೯.

೬. ಕಾಲೇಜು ಜೀವನ ಸುಖಮಯವಾದ್ದರಿಂದ, ಅಲ್ಲೇ ಇನ್ನೆರಡು ವರ್ಷ ಕಳೆಯಬೇಕೆಂಬ ಕುತೂಹಲದಿಂದ, ಉತ್ತರ ಗೊತ್ತಿದ್ದರೂ, ಗೊತ್ತಿಲ್ಲದಂತೆ ತೋರ್ಪಡಿಸಿದ್ದರಿಂದ—ಶೇಕಡ ೧೭.

೭. ಮಾವನ ಮನೆಯ ಆಸ್ತಿಯ ಆಳವನ್ನು ಅರಿತ ಅಳಿಯಂದಿರು ಅದನ್ನು ಕರಗಿಸಲು ಮಾಡಿದ ಪಿತೂರಿಯಿಂದ—ಶೇಕಡ ೧೧

೮. ಟ್ಯೂಷನ್, ಮಾಸ್ತರುಗಳ ಮೇಲೆ ಸೇಡು ತೀರಿಸಿ, ಅವರಿಗೆ ತಾವು ತೆತ್ತ ಹಣವನ್ನು ವಾಪಸ್ ಪಡೆಯುವ ದುರುದ್ದೇಶದಿಂದ ಯದ್ವಾತದ್ವಾ ಉತ್ತರ ಬರೆದದ್ದರಿಂದ—ಶೇಕಡ ೯.

—ಗಂಗಾಧರ.

ಇತರರ ಭಾಷಣಗಳು

ಮೂರು ಜನ 'ಇತರ'ರ ಭಾಷಣ ಮುಗಿದಿತ್ತು; ನಾಲ್ಕನೆಯವರ ನಾಲಗೆಯೂ ನಡುಗತೊಡಗಿತ್ತು. ಐದನೆಯವನು ನಾನು, ಎಂದು ಕಾರ್ಯದರ್ಶಿ ಸೂಚನೆಕೊಟ್ಟು ಎಚ್ಚರಿಸಿದ್ದ.

ಎರಡು ಗಂಟೆಯಿಂದ ನನ್ನ 'ಭಾಷಣ'ವನ್ನು ಚಪ್ಪರಿಸಿ ಚಪ್ಪರಿಸಿ, ಅದರ ಸಾರವೆಲ್ಲ ಹೊಟ್ಟೆಗಿಳಿದು ಅದು ಶುಷ್ಕವಾಗಿಬಿಟ್ಟಿತ್ತು; ಅದರ ರೀತಿ ವಿಷಯ ಕ್ರಮ—ಎಲ್ಲ ಮರತೇಹೋಗಿತ್ತು. ಹೇಗೆ ಪ್ರಾರಂಭಿಸಿ, ಹೇಗೆ ಮುಂದುವರಿಸಿ, ಹೇಗೆ ಮುಕ್ತಾಯಗೊಳಿಸುವುದು ಎಂಬುದೇ ಮರೆತುಹೋಗಿತ್ತು. ನಾಲ್ಕನೆಯ ಭಾಷಣಕಾರ, ಕೊನೆಯದಾಗಿ, ಎಂದಾಗ, ನನಗೊಂದೂ ತೋಚದಾಯಿತು.

ತುಟಿ ಒಣಗಿತ್ತು; ನಾಲಿಗೆ ನೀಡಿ ಅದಕ್ಕೆ ಎಂಜಲು ಸವರಬೇಕೆನಿಸಿತು. ಅರೆ! ಅದಕ್ಕೆ ಬದಲು ಗಂಟಲನ್ನ ಏಕೆ ಕ್ಯಾಕರಿಸಿ ಸರಿಪಡಿಸಿದೆ! ಏನದು? ಎಂಥದೋ ಸದ್ದು? ಗಡಿಯಾರ ಟಿಕ್‌ಟಿಕ್ ಅನ್ನೋ ಸದ್ದೆ? ಅಲ್ಲ. ಎದೆ ಯಾಕೆ ಹೀಗೆ ಹೊಡೆದುಕೊಳ್ಳುತ್ತಾ ಇದೆ? ಇದುವರೆಗೂ ಮೆತ್ತಗಿದ್ದ ಮೇಷಿನು ಈಗೇಕೆ ಇದ್ದಕ್ಕಿದ್ದ ಹಾಗೆ ಢಬ್ ಢಬ್ ಢಬ್ ಎನ್ನುತ್ತಾ ಇದೆ? ಶಿಖೇನೂ ವಿಪರೀತ; ಬೆನ್ನ ಮೇಲಿಂದ ಕೆಳಕ್ಕೆ ಬೆವರ ಹೊಳೆ ಹರಿಯಿತು. ಮನುಷ್ಯ ಪ್ರಾಣಿ ಏನು ವಿಚಿತ್ರ ಅಂತೀನಿ? ಅದರ ಸಜಾತಿ ಪ್ರಾಣಿಗಳನ್ನು ನೋಡಿದರೇನೇ ಅವುಗಳೆದುರು ಮಾತಾಡುವುದಕ್ಕೇನೆ ಹೀಗೆ ಹೆದರಿ ಸಾಯುತ್ತದಲ್ಲಾ!

ಏನದು? ಕಾರ್ಯದರ್ಶಿಯೂ ಅಧ್ಯಕ್ಷರೂ ಪಿಸ ಪಿಸ ಮಾತಾಡುತ್ತಿರುವರಲ್ಲಾ! ಬೆಂಚ್ ಕ್ಲಾರ್ಕೂ ಮುನಿಸೀಫರೂ ಹೀಗೆಯೇ ಕೋರ್ಟುಗಳಲ್ಲಿ ಅಂತರಂಗ! ಮರ್ಯಾದಸ್ಥರು ಹೀಗೆ ಮಾಡಬಾರದು; ಒಬ್ಬರು ಉಪನ್ಯಾಸ ಮಾಡುವಾಗ, ಅವರ ಹಿಂದೆ....ಸಭಿಕರ ಗಮನವನ್ನು ಇತ್ತ ಸೆಳೆಯುತ್ತ.......

ಈತನ ಗಂಟಲು ಹೀಗೆ ಕೀಚಲಾಗಿದೆಯಲ್ಲಾ; ನನ್ನದು ಹೇಗಿರುತ್ತೋ? ನಿಜವಾಗಿಯೂ ನಮ್ಮ ದನಿ ಹೇಗಿದೆ ಅಂತ ನಾವೇ ಕೇಳಿ ತಿಳಿಯುವಹಾಗಿಲ್ಲ; ಭಾಷಣದ ಟೈಂನಲ್ಲಿ ನಾವೇ ಲೊಟಗುಟ್ಟುತ್ತಿರುತ್ತೇವೆ; ಅದರ ನಿಜಸ್ವರೂಪ ತಿಳಿಯುವುದಿಲ್ಲ; ನಿಲ್ಲಿಸಿದ ತಕ್ಷಣ ದನೀನೂ ನಿಂತುಹೋಗುತ್ತೆ, ಹಾಳು.

ಕನ್ನಡಿಯೊಳಗಿನ ಆಸಾಮಿ ನೋಡಿ ನಾವು ಅನೇಕಬಾರಿ, "ಥತ್, ಹೀಗೆ ಇದೇನೆಯೆ ನಾನು?" ಎಂದು ಶಪಿಸುವುದಿಲ್ಲವೆ? ಹಾಗೆಯೇ ಈ ಮನುಷ್ಯ ಕೂಡ, ಈ ಕೀಚಲು ದನಿ ತನ್ನದಲ್ಲ ಅಂತ ಶಪಥ ಮಾಡಬಹುದಲ್ಲವೆ?

"ಕೊನೆಯದಾಗಿ"....ನಾಲ್ಕನೆಯ ಭಾಷಣಕಾರರ ನಾಲ್ಕನೆಯ ಕೊನೆ! ನಾನು ಹೀಗೆ ಮಾಡಲೇಬಾರದು. ಕೊನೆಯದಾಗಿ, ಕಡೆಯದಾಗಿ, ಅಂತ್ಯದಲ್ಲಿ ಇನ್ನು ಒಂದೇ ಒಂದು ಮಾತು ಎಂದು ವಿವಿಧ ವಿನ್ಯಾಸದಲ್ಲಿ ವಿಸ್ತರಿಸಬೇಕೇ ವಿನಹ........

ಅದೇನು ಅದು? ಕಾರ್ಯದರ್ಶಿ ನನ್ನ ಕಡೆ ತಿರುಗಿ ಹುಬ್ಬುಹಾರಿಸಿ ಬಾಯಿ ಗಡ್ಡ ಕೈಹಿಡಿದು ಕಣ್ಣು ಮಿಟುಕಿಸುತ್ತಿರುವನು? ನನ್ನ ಹಿಂದೆ ಕುಳಿತಿರುವ ವ್ಯಕ್ತಿಯನ್ನು ಕುರಿತೊ? ಇರಲಾರದು. ಅದು ನನ್ನ ಮನೆಯುವರು. ನನ್ನನ್ನು ಕುರಿತೇ ಇರಬೇಕು. ಭಾಷಣ ಕಾಲದಲ್ಲಿ ಧೈರ್ಯವಾಗಿರಬೇಕೆಂದು ನನಗೆ ಸಲಹೆ ಕೊಡುತ್ತಿರುವನೊ? ಬಿಸಿ ಬಿಸಿ ಕಾಫಿ ಬೇಕೆ ಎಂದು ಕೇಳುತ್ತಿರುವನೋ? ಸಿಗರೇಟ್ ಬೆಂಕಿಪೆಟ್ಟಿಗೆ ಸಾಲ ಕೇಳುತ್ತಿರುವನೊ? ಎದ್ದು ಬಂದು ಮಾತಾಡಿದರೆ, ಅವನಿಗೇನು ಕಾಲು ಕುಸಿದುಬೀಳುತ್ತದೆಯೆ? ನಾನೂ ಕಣ್ಣರಳಿಸಿ ಹುಬ್ಬುಹಾರಿಸಿ ಮೂಗು ಕೆರೆಯುವುದೇ ಇದಕ್ಕೆ ತಕ್ಕ ಪ್ರತ್ಯುತ್ತರ!

ಅಧ್ಯಕ್ಷರೇ ಕೈಸನ್ನೆ ಮಾಡುತ್ತಿದಾರಲ್ಲಾ! ಎದ್ದು ಅವರ ಹತ್ತಿರ ಹೋಗಲೇ ಬೇಕು....ನನ್ನ ಭಾಷಣ ಇಲ್ಲ ಅಂತ ಅವರು ಸಭೆಗೆ ತಿಳಿಸೇಬಿಟ್ಟರು....ತಣ್ಣಗೆ ಗಾಳಿ ಬೀಸಿತು, ನನ್ನ ಕಿವಿಯೊಳಗೆ ತಿಳಿಸಿದಾಗ....ಅವರೆಲ್ಲ ಏಕೆ ಅಷ್ಟು ಬಿರುಸಾಗಿ ಚಪ್ಪಾಳೆ ಹೊಡೆದರು? ಸೂರೇ ಬಿದ್ದುಹೋಗುವ ಹಾಗಿತ್ತಲ್ಲಾ....ನನ್ನ ಭಾಷಣ ಇಲ್ಲ ಎಂಬುದಕ್ಕೋ ನಾಲ್ಕನೆಯವರದು ಮುಗಿಯಿತಲ್ಲಾ ಎಂಬುವುದಕ್ಕೋ?

— ರೇವಣ್ಣ.

—o—

ಈಗಿರುವ ಎರಡು ವರ್ಷದ ಇಂಟರ್‌ಮಿಡಿಯೇಟ್ ಅವಧಿಯನ್ನು ಇನ್ನು ಮುಂದೆ ಮೂರು ವರ್ಷದ ಅವಧಿಯನ್ನಾಗಿ ಮಾಡಲಾಗುವುದು. (ವಿಶ್ವವಿದ್ಯಾನಿಲಯದ ಅಧಿಕಾರಿಗಳ ಅಭಿಪ್ರಾಯ.)

—ಆಗಲೇ ಇದನ್ನು ಜಾರಿಗೆ ತಂದಿದಾರಲ್ಲ. ಹೊಸದಾಗಿ ಮಾಡುವುದೇನು? (ನೊಂದ ವಿದ್ಯಾರ್ಥಿ)

ಧೈರ್ಯಭಿಕ್ಷೆ

—

ಪೂಜ್ಯ ವಿಜ್ಞಾನ ಮಾರ್ತಾಂಡರಿಗೆ ಅಜ್ಞಾನಿ ಹೇಮನ ಅನಂತಾನಂತ ವಂದನೆಗಳು. ಇಲ್ಲಿ ನಾನು ಕ್ಷೇಮವಾಗಿದ್ದೇನೆಯೇ? ಅಲ್ಲಿ ನೀವೂ ಕ್ಷೇಮವಾಗಿದ್ದೀರೆಂದೂ, ನನ್ನ ಈ ಕಾಗದಕ್ಕೆ ಜವಾಬು ಕೊಡುತ್ತೀರೆಂದೂ ನಂಬುತ್ತೇನೆ. ಅದಾಗಿ :—

ಈಚೆಗೆ ಕೈಗೊಬ್ಬ ಕಾಲಿಗೊಬ್ಬರಂತೆ ವೈದ್ಯರು ಹೆಚ್ಚುತ್ತಿದ್ದಾರೆ; ಅಂದರೆ ದೇಹದ ಎಲ್ಲಾ ಅಂಗಗಳ ಬದಲು, ಒಂದೊಂದೇ ಅಂಗವನ್ನು ರಿಪೇರಿಮಾಡುವುದರಲ್ಲೇ ಪ್ರವೀಣತೆ ಹೊಂದುವ ವೈದ್ಯರ ಸಂಖ್ಯೆಯೇ ಈಚೆಗೆ ಹೆಚ್ಚುತ್ತಿದೆ.

ಒಬ್ಬರ ಮೆದುಳನ್ನು ಇನ್ನೊಬ್ಬರಿಗೆ ಬದಲಾಯಿಸುವುದು ಸಾಧ್ಯವೆಂದು ಫ್ರಾಂಕೇನ್‌ಸ್ಟೀನ್ ನೋಡಿದ ತಮಗೆ ತಿಳಿದೇ ಇದೆ.

ಮೆಡಿಕಲ್ ಕಾಲೇಜಿನವರು ಏರ್ಪಡಿಸಿದ್ದ ಎಗ್ಜಿಬಿಷನ್ ಒಂದರಲ್ಲಿ, ಕಪ್ಪೆಯೊಂದನ್ನು ಕುಯ್ದು ಅದರ ಹೃದಯವನ್ನು ಹೋಳುಮಾಡಿ, ಅದಕ್ಕೆ ಮೇಲಿನಿಂದ ಯಾವುದೋ ಒಂದು ದ್ರಾವಕವನ್ನು ತೊಟ್ಟು ತೊಟ್ಟು ಬಿಡುತ್ತಾ, ಆ ಕಪ್ಪೆಯ ಹೃದಯ ಚಲನೆ, ಜೀವಂತ ಕಪ್ಪೆಗಿಂತ ಜೋರಾಗಿದ್ದಂತೆ ತೋರಿಸಿದ್ದು , ಈಗಲೂ ನನ್ನ ಒಕ್ಕಣ್ಣಿಗೆ ಕುಕ್ಕಿದಂತಿದೆ.

ಹೊಟ್ಟೇ ನೋವಿನಿಂದ ನರಳುತ್ತಿದ್ದವನೊಬ್ಬನು, ತನ್ನ ಹೊಟ್ಟೆಯಲ್ಲಿ ಏನಿದೆ ನೋಡಬೇಕೆಂದು ಕುತೂಹಲಪಟ್ಟಾಗ ಕೀರ್ತಿಶೇಷ ಡಾ||....ರ್ಗ್ ಎಂಬ ಎಂಬ ಘನವೈದ್ಯರೊಬ್ಬರು ಕ್ಲೋರೋಫಾರಂ ಕೊಡದೆ, ಅವನ ಹೊಟ್ಟೆಯನ್ನು ಸೀಳಿ, ರಿಪೇರಿಮಾಡಿ ಪುನಃ ಹೊಲೆದರೆಂದು ಕೇಳಿಬಲ್ಲೆ.

ಮೇಲಾಗಿ ಆಲಿವರ್ ಗೋಲ್ಡ್‌ಸ್ಮಿತನ. "ದಿ ಜಯಂಟ್ ಅಂಡ್ ದಿ ಡ್ವಾರ್ಫ್" ಎಂಬ ಕಥೆಯಲ್ಲಿ ಬರುವ ಕುಳ್ಳನ ಅವಸ್ಥೆಯನ್ನು ನಾನು ಪಡೆದಿದ್ದೇನೆ. ಅಂದರೆ ನನಗೆ ಒಂದು ಕೈ, ಒಂದು ಕಾಲು ಮತ್ತು ಒಂದು ಕಣ್ಣು ಇಲ್ಲ; ಅವುಗಳ ಬದಲು ಕೃತಕ ಕಾಲು, ಕೈ, ಕಣ್ಣು ಇವೆ. ಪಯೋರಿಯಾ ಪೀಡಿತನಾಗಿ, ಹಲ್ಲುಗಳನ್ನು ಕೀಳಿಸಿ ಕೃತಕ ದಂತ ಪಂಕ್ತಿಯನ್ನು ಧರಿಸಿದ್ದೇನೆ.

ಕ್ಷಯರೋಗ ಪೀಡಿತನಾಗಿ, ಕೇವಲ ಒಂದೇ ಒಂದು ಶ್ವಾಸಕೋಶದಿಂದ ಉಸಿರಾಡುತ್ತಿದ್ದೇನೆ, ಇನ್ನೊಂದು ಬರೀ ಬುರುಡೆ, ಖಾಲಿ ಜಾಗ ಭರ್ತಿಮಾಡಲು ಇಟ್ಟಿರುವ (ಡಮ್ಮಿ) ಕೃತಕ ಶ್ವಾಸಕೋಶ ದೊಡ್ಡ ಕರಳು ಅನಾವಶ್ಯಕವೆಂದೂ, ಅದರಿಂದ ಹಾನಿಯೆಂದೂ, ಅದಿಲ್ಲದಿದ್ದರೂ ಬದುಕಿರಬಹುದೆಂದೂ, ಈ ಸಾರಿ ಎಂ. ಎಸ್. ಪರೀಕ್ಷೆಗೆ ಇಟ್ಟಿರುವ "ನಿಮ್ಮ ದೇಹ" ಎಂಬ ಆರೋಗ್ಯದ ಪಠ್ಯ ಪುಸ್ತಕದಿಂದ ತಿಳಿದುಬಂದಿದೆ. ಆದ್ದರಿಂದ ಅನಾವಶ್ಯಕವಾದ ಆ ದೊಡ್ಡ ಕರಳನ್ನು ಆಪರೇಷನ್ ಮಾಡಿಸಿಬಿಡಬೇಕೆಂದಿದ್ದೇನೆ.

ಮೇಲ್ಕಂಡ ವಿಚಾರಗಳಿಂದ, ನಾನು ಬಸ್ಸಿನಲ್ಲಿ ಗಸ್ತುತಿರುಗುವಾಗಲೋ, ಕಾರಿಂದ ಜಾರಿದಾಗಲೋ, ಹಾರೋಪ್ಲೇನಿನಲ್ಲಿ ಹಾರಾಡುವಾಗಲೋ, ಬಿದ್ದು, ಆಕಸ್ಮಿಕವೆಂಬ ಅಪಘಾತಕ್ಕೆ ಸಿಕ್ಕಿ, ಇವರು ಒಂದೊಂದೇ ಕೈ, ಕಾಲು, ಕಣ್ಣುಗಳನ್ನೂ, ಹೃದಯ, ಹೊಟ್ಟೆ, ಶ್ವಾಸಕೋಶ ಇತ್ಯಾದಿಗಳನ್ನು ಬೇರೆ ಬೇರೆ ವೈದ್ಯರಿಗೆ, ಒಂದೊಂದಾಗಿ ಕಳುಹಿಸುವ ಬದಲು, ಒಂದೇ ಸಲ ಎಲ್ಲವನ್ನು ರಿಪೇರಿ ಬಗ್ಯೆ ಕಳುಹಿಸಬೇಕಾಗಿ ಬಂದರೆ, ಆಗ ನಾನ್ಯಾರು, ಎಲ್ಲಿರುತ್ತೇನೆ? ಹೇಗಿರುತ್ತೇನೆ? ಎಂಬುದು ನನಗೇ ತಿಳಿಯದಾಗಿದೆ. ಈ ಅನುಮಾನವನ್ನು ಬಗೆಹರಿಸಲೂ, ಯಾವ ಆಕಸ್ಮಿಕವನ್ನಾದರೂ ನಾನು ಧೈರ್ಯದಿಂದ ಎದುರಿಸಲೂ, ಅನುಕೂಲಿಸುವಂತೆ, ತಾವು ನಿಜವಾಗಿಯೂ ಸರ್ವಾಂಗಗಳನ್ನೂ ಹೊಂದಿ ಸೌಖ್ಯವಾಗಿದ್ದರೆ, ಈ ಕಾಗದ ಕಂಡಕೂಡ್ಲೆ ದಯೆಯಿಟ್ಟು, ಆಶೀರ್ವಾದ ಪತ್ರವೊಂದನ್ನು ದಯಪಾಲಿಸಿರೆಂದು ಬೇಡುವ,

ತಮ್ಮ ಸರ್ವಾಂಗರಹಿತ
— ಹೇಮ.



"ಒಂದು ನಿಮಿಷಾ ತಡೀರಿ ಆರಿಸ ಬೇಡಿ—ನನ್ನ ಚುಟ್ಟಾಗೆ ಬೆಂಕಿ ಹಚ್ಚಿಕೊಂತೀನಿ.

ಕ್ರಿಕೆಟ್ ಬೀಸಣಿಗೆ

ಕ್ರಿಕೆಟ್ ಕ್ಷೇತ್ರದಲ್ಲಿ ಪ್ರವೀಣರಾದ ದಾಂಡಿಗರ ಹಾಗೂ ಚೆಂಡಿಗರ ಆಟ ಓಟಗಳ ವಿವರಗಳನ್ನೆಲ್ಲ ಕಂಠಪಾಠಮಾಡಿ, ಎಲ್ಲರಿಗಿಂತ ಹೆಚ್ಚಾಗಿ ಯಾರು ತಪ್ಪು ಚೆಂಡೆಸೆದರು, ಯಾರು ಹಿಡಿತ ಬಿಟ್ಟರು, ಯಾರು ನಿಂಬೆಹಣ್ಣು ತಿಂದರು, ಯಾರು ಬಿಸಿಲು ತಿಂದರು, ಯಾರು ಬಾತಲಂಕಾರ ಮಾಡಿಸಿಕೊಂಡರು, ಶುಕ್ರವಾರದ ದಿನ ಯಾರು ಹೆಚ್ಚು ರನ್ನುಗಳನ್ನು ಪಡೆದರು, ಏಕಾದಶಿ ದಿನ ಯಾರು ಹೆಚ್ಚು ವಿಕೆಟ್ಟುಗಳನ್ನು ಮುರಿದರು ಎಂಬಿವೇ ಮುಂತಾದ ಅಂಕಿ ಅಂಶಗಳನ್ನು ಬೆಂಗಳೂರು ಮೈಸೂರು ನಗರಗಳ ಪ್ರತಿಯೊಬ್ಬ ಕ್ರೀಡಾಭಿಮಾನಿಯೂ ಬಲ್ಲ.

ಆದರೆ, ನಮ್ಮ ಬೀದಿ ಕೊನೆಯ ಮನೆಯಲ್ಲಿರುವ ಒಬ್ಬ ಕ್ರಿಕೆಟ್ ಮಲ್ಲನನ್ನು ಯಾರೂ ಇದುವರೆಗೆ ಜಗತ್ತಿನ ಮುಂದೆ ತಂದು ನಿಲ್ಲಿಸಿ ಆತನಿಗೆ ಸಲ್ಲಬೇಕಾದ ಮರ್ಯಾದೆಯನ್ನು ಕೊಟ್ಟಂತೆ ತೋರುವುದಿಲ್ಲ. ಆತನಷ್ಟು ಹಿರಿಮೆಯನ್ನು ಕ್ರಿಕೆಟ್ ಪ್ರಪಂಚದಲ್ಲಿ ಯಾರೂ ಇದುವರೆಗೆ ಪಡೆದಂತೆ ಇತಿಹಾಸ ತಿಳಿಸಿಲ್ಲ. ಆತ ಬೊಂಬಾಯಿ, ಮದ್ರಾಸ್, ಬೆಂಗಳೂರು, ಹೈದರಾಬಾದ್, ತಿರುಚ್ಚಿ, ಕೋಳಿಕೋಡ್, ತಿರುವಂದ್ರಂ, ಭದ್ರಾವತಿ ಮುಂತಾದ ಮಹಾ ನಗರಗಳಲ್ಲಿ ಕಳೆದ ೨೦ ವರ್ಷಗಳಿಂದಲೂ ಜರುಗಿರುವ ಎಲ್ಲ ಆಟಗಳನ್ನೂ ಬಯಲು ಅಂಚಿನಲ್ಲೇ ಕುಳಿತು ನೋಡಿದಾನೆ. ಅವನಷ್ಟು ಆಟಗಳನ್ನು ಇತರರೂ ನೋಡಿರಬಹುದು; ಇಲ್ಲವೆನ್ನುವ ಧೈರ್ಯ ನನಗಿಲ್ಲ.

ಆದರೆ, ಈ ಒಂದು ಮಾತನ್ನು ಮಾತ್ರ ನಾನು ಎವರೆಸ್ಟ್ ಬೆಟ್ಟದ ತುತ್ತತುದಿಯ ಮೇಲೆ ನಿಂತು ದಶದಿಕ್ಕುಗಳಿಗೂ ಸಾರಬಲ್ಲೆ; ಎದೆಯ ಮೇಲೆ ಬಲಗೈಯನಿಟ್ಟು ಘೋಷಿಸಬಲ್ಲೆ. ಅದೇನೆಂದರೆ, ಆತನಷ್ಟು ಕಡಲೆಕಾಯಿಯನ್ನು ಬೇರೊಬ್ಬ ಬೀಸಣಿಗೆಯೂ ಮೆದ್ದಿಲ್ಲ. ನಿನ್ನೆಯವರೆಗೂ ಲೆಕ್ಕ ತೆಗೆದು ನೋಡಿದಲ್ಲಿ ಆತ ೬೪ ಮೂಟೆ ಕಡಲೆಕಾಯಿಯನ್ನು ಸುಲಿದುತಿಂದು ಜೀರ್ಣಿಸಿರುವನು! —ಕ್ರಿಕೆಟ್ ಆಟ ನೋಡನೋಡುತ್ತ.

ಮೊನ್ನೆ ಆತನನ್ನು ನಾನು ಭೇಡಿ ಮಾಡಿದೆ. ಬಡಕಲು ದೇಹ, ಚೂಪು ಹಲ್ಲು, ಗುಡಾಣದ ಉದರ. "೬೪ ಮೂಟೆ ತಿಂದು ಮುಗಿಸಿದ ಕೀರ್ತಿ ಗಳಿಸಿದ್ದ

ರಲ್ಲಿ, ನನಗೆ ತುಂಬ ಹೆಮ್ಮೆ; ಯುವಕರಿಗೆ ನಾನು ಒಂದು ಉತ್ತೇಜಕದ ಮಾತು ಹೇಳಬಲ್ಲೆ. ವಿಧವಿಧದ ಉಪಾಹಾರದ ಚಪಲವನ್ನು ತೊರೆದರೆ, ಅವರೂ ನನ್ನ ಈ ರಿಕಾರ್ಡನ್ನು ತಲಪಬಹುದು. ನನ್ನ ಕಣ್ಣಿಗೆ ಮಂಜು ಬೀಳುವುದರೊಳಗೆ, ೬೪೦ ಮೂಟೆಗಳನ್ನು ತಿಂದು, ಭಾರತದ ಕೀರ್ತಿ ಧ್ವಜವನ್ನ ಕ್ರಿಕೆಟ್ ಪ್ರಪಂಚದಲ್ಲಿ ಹಾರಿಸಿ ಜನ್ಮ ಸಾಫಲ್ಯಮಾಡಬೇಕೆಂಬುದೇ ನನ್ನ ಹೆಬ್ಬಯಕೆ" ಎಂದು ಆತ ಹೇಳಿಕೆ ಇತ್ತಾಗ, ನಾನು ಪುಳಕಗೊಂಡೆ

"ನೀವು ಬೆಲ್ಲದ ಚೂರನ್ನೂ ಬಾಯಿಗೆ ಹಾಕಿ ಅಗಿಯುವುದುಂಟೋ?" ಎಂದು ನಾನು ಆತನನ್ನು ಪ್ರಶ್ನಿಸಿದೆ. ಅದಕ್ಕಾತ, "ಮೊದಮೊದಲು ಬೆಲ್ಲ ಬೇಕಾಗುತ್ತದೆ. ಆದರೆ, ನಾಲಗೆ ದಪ್ಪವಾಗುತ್ತ ಆಗುತ್ತ ರುಚಿ ಮಂದವಾಗಿ ಬೆಲ್ಲ ಬೇಡವೆನಿಸುತ್ತದೆ" ಎಂದ.

"ಕಾಯನ್ನು ಸುಲಿಯುತ್ತ ಸುಲಿಯುತ್ತ ನಿಮ್ಮ ಗಮನ ಕ್ರಿಕೆಟ್ ಆಟದಲ್ಲಿ ಸದಾ ನಟ್ಟಿರಲು ಸಾಧ್ಯವೆ?" ಎಂದೆ. "ಅದೊಂದು ರೀತಿಯ ಶತಾವಧಾನ; ಕೈ ಕಾಯುರಸುತ್ತಿರಬೇಕು; ಬಾಯಿ ಔಟ್ ಎಂದು ಅರಚುತ್ತಿರಬೇಕು; ಹಲ್ಲು ಕಟಕಟನೆ ಜಜ್ಜಬೇಕು; ಗಂಟಲು ಗುಳಗುಳನೆ ನುಂಗುತ್ತಿರಬೇಕು; ಕಣ್ಣು ಮಣ್ಣಿನ ಮೇಲೋಡಾಡುವ ಚೆಂಡಿನ ಮೇಲಿರಬೇಕು; ಕಿವಿ ಕಮೆಂಟರಿ ಲಾಲಿಸಬೇಕು; ಇಷ್ಟೂ ಕೆಲಸ ಅಭ್ಯಾಸದಿಂದಲೇ ಸಾಧ್ಯ" ಎಂದ.

"ತಾವು ನಿಜವಾಗಿಯೂ ಪುರುಷಸಿಂಹ" ಎಂದು ಆತನ ಭುಜ ತಟ್ಟಿದೆ. "ಸಿಂಹ ನನ್ನಷ್ಟು ಕಡಲೆಕಾಯಿ ತಿನ್ನಲಿ, ನೋಡುವ" ಎಂದು ಆತ ನಕ್ಕ.

—ಪಾರ್ಥ.

ಸುದ್ದಿ ! ಸುದ್ದಿ ! ಎನುತ ಸುತ್ತಿ
ಅಚ್ಚನೊತ್ತಿ ಕೊಡುವರು !
ಅರ್ಥ ಎಲ್ಲ—ಇತ್ತೊ ? ಇಲ್ಲೊ ?
ಶುದ್ಧ ಸುಳ್ಳು,—ಮಿಕ್ಕವು !

ಕಟುಕ

ಮೂರು ಗಂಟೆಗಳವನು ಹಾಡಿದ
ಮೂಗು ದಾರವೆ ಇಲ್ಲದೆ !
ಒಂದು ಮುಗಿದರೆ ಸಿಳ್ಳೆ ಹೊಡೆವರು
ಬೆಂಚು ಕುರ್ಚಿಯು ಬಡಿವರು
"ಎಂಥ ಉತ್ತೇಜನವ ಕೊಡುವರು"
ಎಂದು ಬಗೆದಾ ಪಾಪಿಯು
ಮತ್ತೆ ಕೀರ್ತನೆ ಮೆತ್ತ ಗೊಂದನು
ಎತ್ತಿ ಪೀಡಿಸುತಿದ್ದನು,
ಸಭಿಕರೆಲ್ಲರು ಗೋಳುಕರೆದರು
ಅಯ್ಯೋ ಕೊಲ್ಲುವನೆನ್ನುತ
ಗೋಡೆ ನಡುಗಿತು ಅವರ ಭೀತಿಗೆ
ಕಟುಕ ನಿಲ್ಲಿಸಲೊಲ್ಲನೆ ?
ನೆಲದ ಬಿಲದಿಂ ತೂರಿ ತಪ್ಪಿಸಿ
ಕೊಳಲು ಹಲವರು ಬಿರುಕು ಹುಡುಕೆ
ಎತ್ತಿ ಹಿಡಿಯುತ ಕತ್ತಿ ಕಂಠವ
ಮತ್ತೆ ತೆಗೆದನು ಸರಿಗಪಧನಿ
ಸತ್ತೆ ಹೋದರು ಸದ್ದಿಗೆಲ್ಲರು.

— ಪಾಟಾಳಿ.

ಕುದುರೆ ಲಾಳ

ಹೌದು. ನನಗೆ ಪೂರ್ಣ ನಂಬಿಕೆ ಇದೆ, ಕುದುರೆ ಲಾಳ ಸಿಕ್ಕರೆ, ಭಾಗ್ಯಲಕ್ಷ್ಮಿಯು ಆಗಮನದ ಗುರುತು ಅದು ಎಂದು. ಇದು ಬರಿಯ ಊಹೆಯ ಮಾತಲ್ಲ; ಪರಂಗಿಯವರ ಕುರುಡು ನಂಬಿಕೆ ನನ್ನ ತಲೆ ಹೊಕ್ಕಿರುವುದೂ ಅಲ್ಲ. ಅನುಭವಾಮೃತ ನನ್ನದು.

ನನ್ನ ಎಂಟನೆಯ ವಯಸ್ಸಿಂದಲೂ ನಾನು ಲಾಳ ಶೇಖರ. ದಾರಿಯಲ್ಲಿ ಬಿದ್ದಿರುವ ಲಾಳಗಳನ್ನೆಲ್ಲ ನಾನು ಮನೆಗೆ ಸಾಗಿಸಿಬಿಡುವೆ. ನಮ್ಮಪ್ಪನಿಗೆ ಅದಕ್ಕಾಗಿ ನನ್ನ ಮೇಲೆ ಹೆಚ್ಚು ಪ್ರೀತಿ. ಲಾಳವೊಂದಕ್ಕೆ ೩ ಕಾಸು ಕೊಡುವನು. ನಮ್ಮೂರಲ್ಲಿ ಒಟ್ಟು ೧೫ ಜಟಕಾಗಳಿದ್ದುವು. ಅಂದರೆ, ೬೦ ಕುದುರೆ ಕಾಲುಗಳು. ವಾರಕ್ಕೊಂದರಂತೆ ಬಿದ್ದರೂ, ವರ್ಷಕ್ಕೆ ೫೨ ಲಾಳ, ೧೩ ಆಣೆ ನನ್ನ ವರಮಾನ.

ದೊಡ್ಡವನಾಗಿ, ಕೊಂಕುಳಲ್ಲಿ ಕೂಸೇರಿದಾಗಲೂ, ನನಗೆ ಲಾಳದ ಮೇಲೆಯೇ ಕಣ್ಣು. ತಲೆ ಎತ್ತದೆ, ರಸ್ತೆಯನ್ನೇ ದಿಟ್ಟಿಸುತ್ತ ನಡೆಯುವುದನ್ನು ನನಗೆ ಈ ಶೇಖರಣಾಚಾಪಲ್ಯ ಕಲಿಸಿತು. ಸಿಕ್ಕ ಲಾಳಗಳನ್ನೆಲ್ಲ ಗೋಡೆಯ ಮೇಲೆ ಮೊಳೆ ಹೊಡೆದು ನಿಲ್ಲಿಸುತ್ತಿದ್ದೆ. ಅದನ್ನು ಕಂಡು ರೇಗಿ ನನ್ನನ್ನ, ಮನೆಯಾತ ಬಾಡಿಗೆ ಭಾಗದಿಂದ ಓಡಿಸಿದ. ಇದರಿಂದಾಗಿ, ನಾನು ಅವಳನ್ನೂ ಕೂಸನ್ನೂ ಮಾವನ ಮನೆಗೆ ರವಾನಿಸಬೇಕಾಗಿ ಬಂತು. ಅದೂ ಒಂದು ಪುಣ್ಯ, ಲಾಳದ್ದು.

ಹಸುಳೆಗಳೆಲ್ಲ ಬೆಳೆದು ಗೋಲಿಯಾಡಲು ತ್ರಾಣಬಂದಾಗ, ಅವು ಲಾಳ ದಾಟ ಅಂತ ಒಂದು ಹೊಸ ಆಟವನ್ನು ರಚಿಸಿ ನಮ್ಮ ಮನೆಯಲ್ಲಿ ಆಡುವುವು. ಲಾಳವನ್ನು ಮೇಲಕ್ಕೆಸೆದು ಹಿಡಿಯುವುದು, ದೂರಕ್ಕೆಸೆದು ನೆಗೆಯುವುದು, ಮರಕ್ಕೆಸೆದು ಅದು ಕೊಂಬೆಗೆ ಸಿಕ್ಕಿಕೊಳ್ಳುವಂತೆ ಮಾಡುವುದು ಇವೇ ಮೊದಲಾದ ಆಟಗಳನ್ನಾಡುವಾಗ, ಅಕ್ಕಪಕ್ಕದವರ ಮಕ್ಕಳ ತಲೆಗೆ ತಗುಲಿ ಗಾಯಗಳಾಗುವುವು. ಆದ್ದರಿಂದ, ವೈದ್ಯರು ನನ್ನ ಮಡದಿ ಮಕ್ಕಳು ನಾನು ಇವರ ಖಾಯಿಲೆಗಳಿಗೆ ಕಮಿಾರ್ಷ ರೂಪದಲ್ಲಿ ಉಚಿತ ಚಿಕಿತ್ಸೆ ಮಾಡುವರು. ಇದೂ ಒಂದು ಪುಣ್ಯ ಅಂತ ನಾನೂ ಹಿಗ್ಗಿದೆ.

ಹಳ್ಳಿಗೆ ಹೋದಾಗಲೆಲ್ಲ ನಾನು ನಾಲ್ಕಾರು ಲಾಳಗಳನ್ನು ಕಿಸೆಗೆ ತುಂಬಿ ಕೊಂಡೇ ಹೋಗುವೆ. ಪಟ್ಟಣಗಳಲ್ಲಿನ ಕುದುರೆಗಳು ಬಿಸಾಕಿದ ಕಬ್ಬಿಣದ ಚಪ್ಪಲಿಗಳನ್ನು ಧರಿಸಿ ಮೆರೆಯಲು ಹಳ್ಳಿ ಥಟ್ಟುಗಳಿಗೆ ಆನಂದ ಎಂದು ನಮ್ಮ ಮಸ್ತಾರ್ ಸಾಬ್ ನನಗೆ ಹೇಳಿದ್ದ. ನಾನು ಉಡುಗೊರೆಯಾಗಿ ಕೊಟ್ಟ ನಾಗರಿಕ ಲಾಳಗಳು ಕೊಂಚ ತೇದು ಹೋದದ್ದಾದರೂ, ಅವನು ಅದನ್ನ ಆದರದಿಂದ ಸ್ವೀಕರಿಸಿ, ಕುದುರೆಯ ಕಾಲಿಗೆ ತಗುಲಿಸಿ. ಕುದುರೆ ತಾನು ಇಬ್ಬರೂ ತುಷ್ಟಿ ಪಡುವರು. ನನಗೂ ನುಗ್ಗೇಕಾಯಿ, ಕೋಳಿಮೊಟ್ಟೆ, ಊದುಬತ್ತಿ ಇತ್ಯಾದಿ ಕೊಡುವನು. ಇದೂ ಒಂದು ಲಾಳದ ಪುಣ್ಯ.

ಮೊನ್ನೆ ನಮ್ಮ ಹುಡುಗನಿಗೂ ಲಾಳದ ಪುಣ್ಯ ತಗುಲಿತು. ಸ್ಕೂಲಿಗೆ ಹೋಗಿದ್ದ; ಇನ್ಸ್‌ಪೆಕ್ಟರ್ ಬಂದಿದ್ದರಂತೆ. ಸವೆದ ಲಾಳವನ್ನು ತಕ್ಕ ಸಮಯಕ್ಕೆ ಬದಲಾಯಿಸದ ತಪ್ಪು ಪ್ರಮಾದವಾಗಿ, ಒಬ್ಬ ಕುದುರೆಯನ್ನೇ ಕಳೆದುಕೊಂಡ ಕಥೆಯನ್ನು ಮೇಷ್ಟರು ವಿವರಿಸುತ್ತಿದ್ದರಂತೆ. ಲಾಳ ಅಂದರೆ ಏನು ಎಂದು ಹುಡುಗರನ್ನು ಕೇಳುವಂತೆ ಇನ್‌ಸ್ಪೆಕ್ಟರು ಮೇಷ್ಟರಿಗೆ ಆಜ್ಞಾಪಿಸಿದರಂತೆ; ಏಕೆಂದರೆ, ಎಂ.ಎ.,ಬಿ.ಟಿ. ಆದರೂ, ಆತನಿಗೆ ಆ ವಿಚಾರ ತಿಳಿಯದು; ಆತ ಬರೀ ಮೋಟಾರಲ್ಲೇ ಓಡಾಡಿದವರು ತಕ್ಷಣ ನಮ್ಮ ಚಂದ್ರು ಕಿಸೆಯಿಂದ ಆರು ಲಾಳಗಳನ್ನು ತೆಗೆದು ಮೇಜಿನ ಮೇಲಿಟ್ಟನಂತೆ. ಇನ್ಸ್‌ಪೆಕ್ಟರಿಗೆ ತಿಳುವಳಿಕೆ ಬಂತು, ಮೇಷ್ಟರಿಗೆ ಗ್ರೇಡ್ ಬಂತು, ಚಂದ್ರುವಿಗೆ ಫ್ರೀಷಿಪ್ ದೊರೆಯಿತು.

ಲಾಳದ ಮಹಾತ್ಮೆ ಅಂದರೆ ಇದು! ಇನ್ನೇನೇನು ಬರುತ್ತೋ ನೋಡುವ. ಯುದ್ಧ ಬಂದರಂತೂ, ಆರು ಕುಕ್ಕೆ ಲಾಳ ಮಾರಿ ೬೦ ರೂಪಾಯಿ ಸಂಪಾದಿಸ ಬಹುದು ಅನ್ನಿ. ಏಳು ವರ್ಷದ ಹಿಂದೆ, ಏಳು ಕುಕ್ಕೆ ಮಾರಿದ್ದೆ.

—ಕಾಮತ್.

ದಾರಿಗನೆ! ಸಾನೆದುರು ಸಿಕ್ಕಾಗ ನಿನಗೇಕೊ
ನನ್ನೊಡನೆ ಮಾತಾಡೆ ಮನ ಬಂದರೆ
ಮಾತಾಡು! ಮಾತಾಡು! ಮರ್ಯಾದೆ ಬಲು ಕೇಡು!
ನನಗು ನಿನ್ನೊಂದಿಗೆ ಮಾತು ಬೇಕು!

ಬಾಸ್ಣ ಮಾಡೋವ್ರಿಗೆ

ಬಾಸ್ಣ ಮಾಡೋ ಜನಗೋಳಿಲ್ಲ
ಎಲ್ರೊ ಈ ಕಡೆ ಬನ್ರೊ–
ಪರಂಗಿಯೋರ್ದು ಕತೆ ಒಂದೈತೆ
ನಾನೇಳ್ತೀನಿ ಕೇಳ್ರೊ !

ಗಲ್ಲೀಸ್ಸಿಕ್ಸೆ ನಡೆಸೋಕಾಗಿ
ಸಾಯ್ಸೋಕೊಬ್ಬನ್ತಂದ್ರು–
"ಸಾಯೋಕ್ಮುಂಚೆ ಅನ್ನೋದ್ಯೆತ"
ಅಂಶ್ ಅವನ್ನ ಕೇಳ್ದ್ರು

ಪರಂಗಿ ಜನಗಳೇಶ ನೋಡಿ
ಮಂದಿ ತುಂಬಾ ನೆರೆದಿದ್ರು
ಸಾಯೋ ಮನ್ಸನ್ನೋಡೋದಕ್ಕೆ
ಮಾತಿನ್ ಮಲ್ರು ಇದ್ರು !

"ಯೋಳಾಕ್ನಂಗೆ ಏನಿಲ್ವಲ್ಲ"
–ಅಂದ ಬಡಪಾಯಿ
ಆವಾಗೊಬ್ಬ ಮುಂದಕ್ಬಂದ
ಬಾಸ್ಣದ್ ಸೀಪಾಯಿ !

"ಪಾಪ, ಆತಂಗೇನೂನೂವೆ
ಯೋಳಾಕಿಲ್ಲ ತಾನೆ!
ಪಾಪ ಪುಣ್ಯದ್ ಟಾಪಿಕ್ ಮೇಲೆ
ಮಾತೆರಡಾಡ್ತೇನೆ"

ಹೀಗಂದಾತ ಬಾಯ್ಬುಷ್ಪಸಿರ್
ಬಾಸ್ಣಕ್ ತೊಡಗಿದ್ಗೊತ್ತು—
ಸಿಕ್ಸೇ ಆಗೋಮನ್ಸನ್ನೇಣು
ಬಾಸ್ಣದ್ ಕತ್ತೀಗ್ ಬಿತ್ತು !

ಅದ್ಕೇ ಅನ್ನೋದ್ ಬಾಸ್ಣ ಮಾಡಿ
ಇಂಸೆ ಕೊಡಬೇಡ್ರಪ್ಪೋ–
ಅಂದಿದ್ಕೇಳ್ದಿ ಕಿರಿಚೋಕ್ನಿಂತ್ರೆ
ಕತ್ನಯ್ದು ಕೋದ್ ತಪ್ಪೋ ?

—ಎ. ಎಸ್. ರಾಮಕೃಷ್ಣ.

ಲೇಬರ್ ಪಕ್ಷ

ಏಳು ಮೆಂಬರು ಹೆಚ್ಚು, ಏಳು ಕೈಗಳ ಮೆಚ್ಚು
ಏಳು! ಲೇಖರ ವೀರ ವಿಜಯ ಪಕ್ಷ!
ಏಳು ಸಮತಾವಾದ! ಏಳು ಕೂಲಿಯರಾಜ್ಯ!
ಏಳು, ತಿರು ತಿರುಗಿ ವಿಜಯ!
ಶೂರ ಬೆವಿನರ ಮರಣ, ವೀರ ಬೆವವನ ಕೊನೆಯು,
ಭೀರು ವಿಲ್ಸನ ರಾಜಿನಾಮೆ ಭಯವು!
ಧೀರ ಮರಿಸನ ನಯವು, ಪೂರ ಬೈಗಳ ಮಳೆಯು
ಈ ರೀತಿ ನಿನ್ನ ಇರವು.
ಭರದೆ ಹಳಿಯುವ ಚರ್ಚಿಲವನ ಜರಿಯುವ ಹೊಳೆಯು
ಇರದೆ ಪ್ರತಿರಾತ್ರಿಯು ಜಡಿವ ಸಿಡಿಲೂ
ವರ ಪರೀಕ್ಷೆಯ ಕದನ, ಅರರೆ! ಟೋರಿಯ ಟಾಂಗು!
ಇರುವಂಥ ನಿನ್ನ ಪರಿಯು!
ಸತ್ತಿರುವರ್ರೈದಾರು, ಸುತ್ತಿರುವ ವಿಷ ಜಗವು
ಬತ್ತಿರುವುದಾ ಏಳು, ಮತ್ತೆ ಮೂರು!
ಎತ್ತ ಏರಿಗೆ ಎಳೆಯೆ, ಕೋಣನೋ ನೀರೆಡೆಗೆ
ಒತ್ತಿ ಭಯ ನಟ್ಟ ಬೀಡು
ಇಂದಿನಂತಹ ಬೀಳು ಇಂದಿನಂತಹ ಕೀಳು
ಎಂದೆಂದಿಗೂ ಅಟ್ಲೆ ಅನುಭವಿಸಿಲ್ಲ
ಮುಂದೆ ಕಾಯುವ ಕುರುಬ ಹಿಂದೆ ತೋಳವು ನುಗ್ಗೆ
ಸಂದಿತಾಯುಷ್ಯವೆಂದು ಚೀರುತಿಹನೋ
ಇಂಗ್ಲಾಂಡಿನಲಿ ನೋಡು ತ್ರಾಣ ಹೋದಾ ಬೀಡು
ಲೇಬರಿದ್ದಾ ನಾಡು ಲೇಬರಿಂದಲೆ ಕಾಡು
ಮೂರು ಕೈ ಬಲದಿಂದ ಎಷ್ಟು ದಿನ ನಿಂತೀತು
ಕಂಠಗತಪ್ರಾಣ, ನರಳುತಿದೆ, ನೋಡು.

—ಗಂಗಾಧರ.

ಅರಶಿನದ ಹಲಗೆ

ರೈಲುಸ್ಟೇಷನ್ ಹೆಸರುಗಳ ಹಲಗೆಗಳನ್ನೆಲ್ಲ ಈಚೆಗೆ ಬಣ್ಣ ಬದಲಾಯಿಸಿ, ಬಿಳಿ ಬಣ್ಣಕ್ಕೆ ಬದಲು ಹಳದಿ ಹಚ್ಚಿ, ಹೊಸದಾಗಿ ಹೆಸರು ಬರೆದಿರುವುದನ್ನು ಪ್ರಯಾಣಿಕರೆಲ್ಲರೂ ಬಲ್ಲರು. ಇದನ್ನು ಮಾಡಿಸಿದವರು ಮೇಧಾವಿಗಳು, ಕಲಾ ಪ್ರೇಮಿಗಳು, ಅರಶಿನ ಮುತ್ತೈದೆಯರ ಲಕ್ಷಣವೆಂದು ಬಲ್ಲ ಸನಾತನಿಗಳು, ಓಡುವ ಗಾಡಿಯೊಳಗಿಂದ ಹೊರಬರುವ ಮಾನವ ಚಕ್ಷುಗಳಿಗೆ ಹಸುರು ಮರಗಳ ಹಿನ್ನೆಲೆಯಲ್ಲಿ ಹಳದೀ ಬಣ್ಣವೇ ಸ್ಪಷ್ಟವಾಗಿ ಕಾಣಿಸುವುದೆಂದು ಸಂಶೋಧನೆಯಿಂದ ಕಂಡುಹಿಡಿದ ವೈಜ್ಞಾನಿಗಳು, ಸ್ವತಂತ್ರ ಭಾರತದ ಸರ್ಕಾರೀ ರೈಲುಗಳ ನಿಲ್ದಾಣಗಳಿಲ್ಲ ಮಂಗಳದಾಯಕವೆಂದು ಸೂಚಿಸಲಿಚ್ಛಿಸುವ ಶುಭಮನಸ್ಕರು. ರೈಲಿನ ಇಲಾಖೆಯು ಬಣ್ಣವನ್ನೇ ಬದಲುಮಾಡಲು ಆಸಕ್ತಿಯಿರುವ ಆಶಾವಂತರು; ಬಿಳಿಯರು ದೇಶಬಿಟ್ಟೋಡಿದರು ಎಂಬ ಸುವಾರ್ತೆಯನ್ನು ದೇಶದ ಸ್ಟೇಷನ್ ಸ್ಟೇಷನ್ನಿಗೂ ಸಾರಲು ಆಸಕ್ತಿ ಇರುವ ರೈಲ್ವೆ ಬೋರ್ಡಿನವರು.


ಬಿಳಿಯನ್ನಳಿಸಿ ಅರಶಿನದ ಕಾಮಾಲೆಯನ್ನು ಹರಡಿಸಿದ್ದು ಈ ಕಲಾ ಕ್ರಾಂತಿಯ ಮೊದಲ ಹೆಜ್ಜೆ, ಅಷ್ಟೆ. ಇನ್ನೊಂದೆರಡು ಮೂರು ತಿಂಗಳಲ್ಲೇ ಡಬ್ಬಿಗಳಿಗೂ ಸಿಂಗಾರ ಮಾಡುವ ಯೋಜನೆ ಇದೆಯಂತೆ. ಮಹಿಳೆಯರ ಡಬ್ಬಿಗೆ ಕುಂಕುಮದ ಬಣ್ಣ, ಮೊದಲನೆಯ ತರಗತಿಗೆ ಚಿನ್ನದ ಬಣ್ಣ, ಎರಡನೆಯದಕ್ಕೆ ಬೆಳ್ಳಿ, ಇಂಟರ್ ತರಗತಿಗೆ ಹಿತ್ತಾಳೆ, ಮೂರನೆಯ ತರಗತಿಗೆ ಕಾಷಾಯ ಬಳಿಯುವ ಏರ್ಪಾಟಾಗುತ್ತದಂತೆ. ಹಾಗೆಯೇ, ಗುಡ್ಸ್ ಡಬ್ಬಿಗಳ ಹೊರಮೈಗೆ ಬಗೆಬಗೆ ಸಾಮಾನುಗಳನ್ನು ಸೂಚಿಸುವ ತರತರದ ಬಣ್ಣಗಳು ಬರುತ್ತವೆ.

ಈಗ. ಸ್ಟೇಷನ್ ಕೈಮರಗಳು ಚಿಗುರದೆ ಹೂವು ಕಾಯಿ ಬಿಡದೆ ಬೋಳು ಬೋಳಾಗಿರುವುದನ್ನೂ ಗೋಪಾಲಸ್ವಾಮಿ ಅಯ್ಯಂಗಾರರು ಸಹಿಸುವುದಿಲ್ಲವೆಂದು ಕೇಳಿಬರುತ್ತಿದೆ. ಅಲ್ಲದೆ, ನಿಲ್ದಾಣಗಳ ಕಂಬಗಳಿಗೆಲ್ಲ ಏಕೆ ನಾಮ ಬಳಿಯಬಾರದೆಂದು ಹಲವು ಹೊಗಳುಭಟ್ಟರು ಅವರನ್ನು ಕೇಳಿರುವುದಾಗಿ ಸುದ್ದಿ. ಬಣ್ಣಬಣ್ಣದ ಉಡಿಗೆ ತೊಡಿಗೆಗಳನ್ನು ತೊಡಿಸಿ. ಮಾಸ್ತರುಗಳನ್ನೂ ಈಗಿನದಕ್ಕಿಂತ ಅಂದಚಂದವಾಗಿ ಮಾಡಬಹುದಂತೆ. ಉಪಾಹಾರ ಹಂಚುವ ಜನಕ್ಕೆ ಹಲವುಕಡೆ ಪರೀಕ್ಷಾರ್ಥವಾಗಿ ಕೆಂಪು ಟೋಪಿಯನ್ನು ಒತ್ತಾಯಪಡಿಸಲಾಗಿದೆ. ಟಿಕೀಟ್ ಪರೀಕ್ಷಕ ಸಿಬ್ಬಂದಿಗೆ ಹೊಸತರಹದ ಚೌಕಳಿ ರಂಗುಗಳನ್ನುಡಿಸಿದರೆ,

ಅವರು ನುಗ್ಗುವ ಡಬ್ಬಿಗಳಲ್ಲೆಲ್ಲ ಮಕ್ಕಳು, ಅಳು ನಿಲ್ಲಿಸಿ ಶಾಂತರಾಗುವರು ಎಂದು ಒಬ್ಬರು ಸೂಚನೆ ಕೊಟ್ಟಿರುವರು.

ಈಚೆಗೆ ಅತಿಯಾಗಿ ಏರಿಸಲಾದ ರೈಲು ಪ್ರಯಾಣದ ದರಗಳನ್ನು ಜನರು ಸಂತೋಷದಿಂದ ತೆರಬೇಕಾದರೆ, ರೈಲುಗಾಡಿಗಳು ಇನ್ನೂ ಶೋಭಾಯಮಾನವಾಗಿ, ಸ್ಟೇಷನುಗಳು ಇನ್ನೂ ಮಿರುಮಿರುಗುವ ಗೊಂಬೆ ಮನೆಗಳಾಗಿ, ನೌಕರರು ಕಣ್ಣಿಗೆ ಹಬ್ಬವಾಗಿರಬೇಕೆಂಬುದೇ ಈ ಮಾರ್ಪಾಟುಗಳ ಆಶಯ.

ಹಾಗೆಯೇ, ಮೂರನೆಯ ತರಗತಿಯ ಪ್ರಯಾಣಿಕರ ಮನರಂಜನೆಗಾಗಿ ಇಲಾಖೆಯವರು ಉಚಿತವಾಗಿ ಊರಿಂದೂರಿಗೆ ಸಾಗಿಸಿ ಡಬ್ಬಿಡಬ್ಬಿಗೂ ಬದಲಾಯಿಸುತ್ತಿರುವ ಗಾಯಕಭಿಕ್ಷುಗಳ, ಎದೆಬಡಕರ, ಲಾವಣಿಕಾರರ, ಸರ್ಕಸ್ ಹುಡುಗರ, ಚಲನಚಿತ್ರ ಹಾಡುಗಾರಿಕೆಯವರ, ಸಂಖ್ಯೆಯನ್ನು ಇನ್ನೂ ಹೆಚ್ಚಿಸಿ, ಅವರಿಗೆ ಕಣ್ಣಾನಂದಕರವಾದ ಸಮವಸ್ತ್ರಗಳನ್ನೂ ಸಂತಾನಂರವರು ಹಂಚುವರಂತೆ.



ಈ ಅದ್ಭುತ ಮಾಯಾಜಾಲದ ಉಂಗುರಗಳನ್ನು ತಯಾರಿಸುವ ಈ
ಜಲಂಧರ್‌ನವರನ್ನೆಲ್ಲ ಕೇಂದ್ರ ಮಂತ್ರಿಮಂಡಳಕ್ಕೆ
ಸೇರಿಸಿಕೊಂಡರೆ ನಮ್ಮ ದೇಶದ ಕ್ಲಿಷ್ಟ
ಸಮಸ್ಯೆಗಳೆಲ್ಲ ಪರಿಹಾರ
ವಾಗಬಹುದಲ್ಲವೆ ?!!"

ಗರ್ಗರ

ಬಾ ! ಕವಿಯೇ ! ಇನ್ನಾದರು ಆವೇಶವ ತಾಳು ;
ಓ ! ಗಾಯಕ ! ಬಾ ಇಲ್ಲಿಗೆ, ಈ ಹಾಡನು ಕೇಳು ;
ಈ ದುರ್ಲಭ ಸಂಗೀತಕೆ ಪಡಿಯೇನಿದೆ ? ಹೇಳು ;
ಇನ್ನಾದರು ತಪ ಗೈಯುವ, ಬರಲಿಂತಹ ಕೊರಳು !

ಇದಕೆದುರಿಗೆ ಗಂಧರ್ವರ ಗಾಯನವನು ಬಿಸುಡು !
ಈ ಗಾನವ ಸವಿಯದ ಕಿವಿ ಎಂತಿದ್ದರು ಬರಡು !
ಮರದೆಲೆಯೂ ಉದುರುತ್ತಿವೆ ಈ ಹಾಡನು ಕೇಳಿ,
ಕೋಗಿಲೆಯೂ ಬೆಪ್ಪಾಗಿದೆ, ಅತಿ ಮೌನವ ತಾಳಿ

ಈ ಮಟ ಮಟ ಮಧ್ಯಾಹ್ನದ ಸುಡು ಮೌನವ ನೊಡೆದು
ತೂಗಡಿಸುವ ದಿಗ್ದೇವರ ಕಿವಿಯಾಳವ ಕೊರೆದು,
ಇಳಿದೇರುತ ಹೊಮ್ಮುತ್ತಿದೆ ಖರಗರಳಗೀತ !
ಏನ್ ಸುಂದರ ! ಏನ್ ಬಂಧುರ ! — ಈ ಗರ್ಗರ ಮೊರೆತ

— ದಿಬ್ಬಯ್ಯ.

ನಮ್ಮ ಪೂರ್ವಿಕರು ನಮಗಿಂತಲೂ ಶಕ್ತಿವಂತರಾಗಿಯೂ ಮತ್ತು ಬಲಾಢ್ಯರಾಗಿಯೂ ಇದ್ದು ಒಂದುವೇಳೆ ಕಲ್ಲುತಿಂದರೂ ಜೀರ್ಣಿಸಿಕೊಳ್ಳುವ ಶಕ್ತಿಯಿತ್ತು.—(ಭಾಷಣ)

—ನಮಗೂ ಕಲ್ಲುತಿಂದು ಜೀರ್ಣಿಸಿಕೊಳ್ಳುವ ಶಕಿ ಯಿದೆ.

ಗುಂಡಯ್ಯ !

ಮಧ್ಯಾಹ್ನ ಮೂರು ಗಂಟೆ. ಎಲ್ಲೆಲ್ಲಿಂದಲೋ ಬೆವರೆಲ್ಲಾ ಒಟ್ಟುಗೂಡಿ ಕತ್ತಿನ ಪಟ್ಟಿ ಒಳಕ್ಕೇ ನುಗ್ಗುತ್ತಿತ್ತು. ಷರಟು, ಚರ್ಮ ಬೇರೆ ಬೇರೆ ಎನ್ನುವ ಭಿನ್ನ ಭಿನ್ನ ಭಾವನೆಯೇ ಹೋಗಿತ್ತು. ಕೂತ ಕುರ್ಚಿಯಿಂದ ಎದ್ದರೆ ಕುರ್ಚಿಯೂ ಏಳುತ್ತಿತ್ತು. ಸನ್ನಿವೇಶ ಹಾಗಿತ್ತು.

"ಗುಂಡಯ್ಯಾ !" ಎಂಬ ಕೂಗು ಮೂರು ಗಂಟೆಯ ಮೂರನೆಯ ಗಂಟೆ ಬಾರಿಸಿದಾಗ ಕಚೇರಿಯಲ್ಲಿದ್ದ ನೌಕರರೆಲ್ಲರ ಕೊರಲಿಂದಲೂ ಹೊರಬಿತ್ತು.

ಗುಂಡಯ್ಯ ಒಂದು ತಟ್ಟೆತುಂಬಾ ನೀರುಮಜ್ಜಿಗೆ ಹಾಕಿದ ಗ್ಲಾಸುಗಳನ್ನು ಇಟ್ಟುಕೊಂಡು ಬಂದ. ಗೋವರ್ಧನಗಿರಿಯನ್ನು ಹೊತ್ತ ಕೃಷ್ಣನಂತೆ ಒಂದು ಕ್ಷಣ ಬಾಗಿಲಲ್ಲಿ ನಿಂದ. ವೈಯ್ಯಾರದ ನಡಿಗೆಯಿಂದ, ಗ್ಲಾಸುಗಳು ಒಂದಕ್ಕೊಂದು ಕೊಂಚ ತಗುಲಿ ಕಿಂಕಿಣನಿನಾದ ಉಂಟುಮಾಡುವ ಗಾನದ ತಾಳಕ್ಕೆ ಸರಿಯಾಗಿ ಹೆಜ್ಜೆಹಾಕುತ್ತ ಬಂದ. ನಮ್ಮೆಲ್ಲರ ಮೇಜುಗಳ ಮೇಲೂ ಒಂದೊಂದು ಗ್ಲಾಸು ಇಟ್ಟು ನಮ್ಮ ಕೃತಜ್ಞತಾಪೂರ್ವಕ ವಂದನೆಯನ್ನು ನಮ್ಮ ಮುಖದ ನೋಟದಿಂದಲೇ ಸ್ವೀಕರಿಸಿ ಹೊರಬೀಳುತ್ತಿದ್ದ.

ಆ ಹೊತ್ತಿನಲ್ಲಿ ಆ ಗ್ಲಾಸು ಮಜ್ಜಿಗೆ ಇಲ್ಲದಿದ್ದರೆ ಆ ಕಚೇರಿಯಲ್ಲಿದ್ದ ನಾವೆಲ್ಲಾ ಅಂದೇ ಮಾಯವಾಗುತ್ತಿದ್ದೆವು. ಕಾಯಕಲ್ಪಮಾಡಬಹುದಾದ ಆ ಮಜ್ಜಿಗೆಯನ್ನು ಭೂಲೋಕ ಭುವರ್ಲೋಕ ಸುವರ್ಲೋಕ ಇತ್ಯಾದಿ ಲೋಕಗಳಲ್ಲೆಲ್ಲಾ ಒಬ್ಬಾತನೇ ಮಾಡಬಲ್ಲ. ಎಣೆಯಿಲ್ಲದ ಸಮನನ್ನರಿಯದ ಆ ಗುಂಡಪ್ಪ ನಮ್ಮ ಕಚೇರಿಯ ದಫ್ತರ ಬಂದಿ.

* * *

ಶುಕ್ರವಾರ ಕಚೇರಿಯಲ್ಲೆಲ್ಲಾ ಕೆಟ್ಟ ಸುದ್ದಿ. ಪೋಲೀಸ್ ಕಚೇರಿಯಲ್ಲಿ ಇನ್ನೆಂತಹ ಸುದ್ದಿ ಬರಬಹುದು ಎಂದು ನೀವು ಕೇಳಬಹುದು. ಆದರೆ ನಮ್ಮ ಪೋಲೀಸ್ ಕಚೇರಿಯಲ್ಲಿ ಅವರಿವರ ಕೆಟ್ಟ ಸುದ್ದಿ ಬರುತ್ತದೆಯೇ ವಿನಹಾ ನಮಗೆ ನಮ್ಮ ಕೆಟ್ಟಸುದ್ದಿ ಸಾಧಾರಣವಾಗಿ ಬರುವುದಿಲ್ಲ. ಅಂದರೆ ಅದರ ಮಹತ್ವ ಕೇಳಬೇಕೆ ?

ನಮ್ಮ ಅಧಿಕಾರಿಗೆ ಮಂಡ್ಯಕ್ಕೆ ವರ್ಗ. ಆತ ಗುಂಡಯ್ಯನನ್ನೂ ಅಲ್ಲಿಗೆ ವರ್ಗಮಾಡಿಸಿಕೊಂಡು ಹೊರಡಲು ಸಿದ್ಧಮಾಡಿದ್ದರು ಎಂಬುದೇ ಆ ಅಘೋರ ಕೆಟ್ಟಸುದ್ದಿ.

ನಾವೆಲ್ಲಾ ಯೋಚಿಸಿದೆವು. "ಎಲ! ಎಲಾ! ಇಷ್ಟು ದಿನವೂ ಆ ಅಧಿಕಾರಿ ನಾಗಯ್ಯನಿಗೆ ಅರಿಯದೆ ಹಾಲು ಎರೆದೆವಲ್ಲಾ! ಸರಿಯಾಗಿ ಕೆಲಸಮಾಡಿದೆವಲ್ಲಾ! ಕಡೆಗೂ ನಾಗಯ್ಯ ನಮ್ಮ ಅಮೃತ ಕಲಶದಂತಿರುವ ಗುಂಡಯ್ಯನನ್ನೇ ಹಾರಿಸಿಕೊಂಡು ಹೋಗಿ ನಮಗೆಲ್ಲಾ ವಿಷಗರೆದನಲ್ಲಾ" ಎಂದು ಯೋಚಿಸಿದೆವು. ಮೂಗಿನ ಮೇಲೆ ಬೆರಳಿಟ್ಟೆವು. ಭಾವೀ ಭವಿಷ್ಯವೇ ಖಾಲಿಯಾಗಿ ಕಾಣಿಸಿತು.

* * *

ವೆಂಕಟಸಾಮಿ ಬಲು ಚೂಟಿ. ಆಹಾರದ ಇಲಾಖೆಗೆ ಹೋಗಿ ಬಂದ ಮೇಲೆ ಆತನು ಬಲು ಚಿಗುರಿದ್ದಾನೆ. ಆತನಂದ "ಈ ನಾಗಯ್ಯನ ವಿಷಕ್ಕೆ ನನಗೆ ಮದ್ದುಗೊತ್ತು. ಇದಕ್ಕೊಂದು ಗರುಡಪಚ್ಚೆಮಣಿ ನನಗೆ ತಿಳಿದಿದೆ" ಎಂದು.

ಎಲ್ಲರೂ ಕಿವಿ ನಿಮಿರಿಸಿಕೊಂಡು, ವೆಂಕಟಸಾಮಿಯ ಮೇಜಿನ ಹತ್ತಿರ ಸುತ್ತಲೂ ಕ್ಯೂ ನಿಂತೆವು.

"ಎಲೈ ಮಹಾತ್ಮ! ನಿನ್ನ ಚಾಣಕ್ಯ ತಂತ್ರವನ್ನು ನಮಗೆ ಅರುಹು, ನಿನ್ನ ಗರುಡಪಚ್ಚೆಮಣಿಯನ್ನು ನಮಗೆ ತೋರು, ನಿನ್ನ ವಿಷರೂಪ ಮರ್ದನ ನೋಡಲು ಕಾದಿರುವೆವು" ಎಂದು ಹೇಳುವ ಮುಖದ ಲಕ್ಷಣ ಮಾಡಿಕೊಂಡು, ಗೋಪಿಯರಂತೆ ಸುತ್ತಲೂ ನಿಂತೆವು.

ಆಗ ಆತನಂದ "ನಮ್ಮ ಗರುಡಪಚ್ಚೆಮಣಿ ನಮ್ಮ ಪೋಲೀಸು ಡಾಕ್ಟರು. ಆತನನ್ನು ಹಿಡಿಯೋಣ. ಆತನಿಗೆ ನಮಗೆ ಬಂದಿರುವ ವಿಷಪ್ರಾಶನ ಸನ್ನಿವೇಶ ತಿಳಿಸೋಣ. ಆತ ಗುಂಡಯ್ಯನಿಗೆ ಖಾಯಿಲೆಯೆಂದು ಒಂದು ವಿಷನಿವಾರಕ ಸರ್ಟಿಫಿಕೇಟ್ ಕೊಡಲಿ. ನಾಗಯ್ಯ ಮಂಡ್ಯಕ್ಕೆ ತಲಪೋತನಕ ಗುಂಡಯ್ಯ ಖಾಯಿಲೆ. ಆ ಮೇಲೆ ವರ್ಗದ ಹುಕುಮನ್ನು ಹಿಂತಿರುಗಿಸಲು ನಾನು ಶೂನ್ಯ ಮಾಡುತ್ತೇನೆ, ಹೆಡ್ಡಾಫೀಸಿನಲ್ಲಿ" ಎಂದು.

ವೆಂಕಟಸಾಮಿಯ ಮೆದುಳು ಹೀಗೆ ಇಷ್ಟು ತೀಕ್ಷ್ಣವಾಗಿ ಚರಿಸಲು ಆತ ಹೊಟ್ಟೆಗೆ ಏನು ತಿನ್ನುತ್ತಾನೋ ಎಂದು ಭಯಭ್ರಾಂತರಾಗಿ ಆಶ್ಚರ್ಯಚಕಿತರಾಗಿ ನಾವೆಲ್ಲಾ ಆ ಸಾಯಂಕಾಲ ಡಾಕ್ಟರ ಮನೆ ಬಾಗಿಲಲ್ಲಿ ಕಾದೆವು.

ಸಾಯಂಕಾಲ. ಸಾಯುವ ಕೆಲಸ ಮುಗಿಸಿಕೊಂಡು ಪೋಲೀಸ್ ಡಾಕ್ಟರು ಮನೆಗೆ ಬಂದರು. ನಮ್ಮ ಸಮೂಹ ನೋಡಿ ಬೆದರಿದರು. ಯಾರಾದರೂ ಇಬ್ಬರು ಬಂದು ನಿಮ್ಮ ಅಹವಾಲು ಹೇಳಿರಿ ಎಂದು ಹೇಳಿ ಮನೆಯೊಳಗೆ ಹೋದರು.

ನಾನೂ ವೆಂಕಟಶಾಮಿ ಆ ನೌಕರ ಸಮೂಹದ ಪ್ರತಿನಿಧಿಗಳಾಗಿ ನಾವೇ ಆಯ್ಕೆ ಮಾಡಿಕೊಂಡೆವು. ಡಾಕ್ಟರ ಕೊಠಡಿಯನ್ನು ಸೇರಿದೆವು. ಇದ್ದ ಸಂಗತಿ, ಮಾಡಬೇಕಾದ ಸನ್ನಾಹ, ಡಾಕ್ಟರ ಕೆಲಸ ಎಲ್ಲವನ್ನೂ ಹೇಳಿದೆವು.

"ಸುಳ್ಳು ಸರ್ಟಿಫಿಕೆಟ್ಟು ಹೇಗೆ ಕೊಡಲಿ ನಾನು! ಬರೀ ಡಾಕ್ಟರಲ್ಲ ನಾನು! ಪೋಲೀಸ್ ಡಾಕ್ಟರು! ಬೇಲೀನೆ ಎದ್ದು ಹೊಲ ಮೇಯಬಹುದೇ! ಹೆಣ್ಣು ಕೊಟ್ಟ ಮಾವನೇ ಅಳಿಯನ ಎದೆ ಮೇಲೆ ಬರೆ ಹಾಕಬಹುದೇ! ಗಾಂಧೀನೇ. ಟೋಪಿ ಹಾಕಬಹುದೇ! ಇದು ನನ್ನಿಂದ ಸಾಧ್ಯವಲ್ಲ! ಆದರೂ ನನಗೆ ತಿಳಿಯದ ಹಾಗೆ ಅವನೇನಾದರೂ ಸುಳ್ಳು ಖಾಯಿಲೆ ಹೇಳಿದರೆ........ಭಗವಂತ ನಿದ್ದಾನೆ!" ಎಂದು ಡಾಕ್ಟರಂದರು ಮುಗುಮ್ಮಾಗಿ.

*　　　*　　　*

ಡಾಕ್ಟರ ಹತ್ತಿರ ಮಾರನೆಯ ಬೆಳಗ್ಗೆ ನಾವೆಲ್ಲಾ ಸೇರಿ ಗುಂಡಯ್ಯನನ್ನು ಮೆರವಣಿಗೆಯಲ್ಲಿ ಕರೆದುಕೊಂಡು ಹೋದೆವು. ಹಿಂದಿನ ರಾತ್ರಿ ಅತನಿಗೆ ಇಂಗು, ಹಸಿ ಇಂಗು ತಿನ್ನಿಸಿದ್ದೆವು, ಬೇಯದ ಬೇಳೆ ಉಣ್ಣಿಸಿದ್ದೆವು. ಬೆಳಗಾಗುತ್ತಲೂ ಹರಳೆಣ್ಣೆಯನ್ನು ಗೊಟ್ಟದಲ್ಲಿ ಕುಡಿಸಿದ್ದೆವು.

ಗುಂಡಯ್ಯ ಅಧಿ ಆತ್ಮನಾದವ. "ಎಲ್ಲಿ ಬೇಕಾದರೂ ಸೇವೆ ಮಾಡಬೇಕು. ಯಾರ ಸೇವೆ ಬೇಕಾದರೂ ಮಾಡಲೇಬೇಕು ನನಗೆ ಮುಂಡ್ಯವಾದರೇನು ನಿಮ್ಮೂರಾದರೇನು, ನಳಗೋತ್ರದವ ನಾನು. ಬಾಯಾರಿದ ಬಳಲಿದ ಜನರ ತೃಷ್ಣೆ ತೀರಿಸುವ ಸಾಹಸ ಈಶ್ವರ ನನಗೆ ಕೊಟ್ಟಿದ್ದಾನೆ. ಅದನ್ನು ನಾನು ನಿರ್ವಹಿಸುತ್ತೇನೆ" ಎಂದೇ ಅನ್ನುತ್ತಿದ್ದ.

ಮಾಡೋ ಸೇವೇ ನಮಗೇ ಮಾಡು ಎಂದು ನಾವೆಲ್ಲ ಹೇಳಿ ಅವನನ್ನು ಒಪ್ಪಿಸೋ ಹೊತ್ತಿಗೆ, ನಾವೆಲ್ಲಾ ಮಿಡಿ ಉಪ್ಪಿನಕಾಯಿ ಆದ ಹಾಗೆ ಸುಕ್ಕು ಸುಕ್ಕಾಗಿದ್ದೆವು. ಆದರೂ ಅದರ ಹಾಗೆಯೇ ಖಾರ ಕಡಿಮೆ ಆಗಿರಲಿಲ್ಲ. ಡಾಕ್ಟರು ಅವನನ್ನು ಪರೀಕ್ಷೆ ಮಾಡಿ ತಮ್ಮ ವರದಿಯನ್ನು ಗೋಪ್ಯವಾಗಿ ಪೋಲೀಸ್ ಸೂಪರಿಂಟೆಂಡೆಂಟರಿಗೆ ಕಳಿಸಿದರು.

*　　　*　　　*

ನಾನೂ ವೆಂಕಟೇಶಾಮಿ ಸ್ವಯಂಕೃತನಾಯಕರು ಡಾಕ್ಟರನ್ನು ಸಾಯಂಕಾಲ ಸಂದರ್ಶಿಸಿದೆವು.

ಡಾಕ್ಟರಂದರು, "ಗುಂಡಯ್ಯನನ್ನು ಬಲು ಹುಷಾರಾಗಿ ಪರೀಕ್ಷೆ ಮಾಡಿದೆ. ಕಲ್ಲು ಗುಂಡಿನ ಹಾಗಿದ್ದಾನೆ. ಕಬ್ಬಿಣದ ಗುಂಡಿನ ಹಾಗಿದ್ದಾನೆ. ಅವನಿಗೇನು ರೋಗ ಎಂದು ಬರೆಯಲಿ. ನನ್ನಿಂದ ಅಷ್ಟು ಸುಳ್ಳು ಹೇಳಲು ಸಾಧ್ಯವಿಲ್ಲ" ಅಂತ.

ನಮ್ಮಿಬ್ಬರ ಮೂಗೂ ತುಟಿಯ ಕೆಳಕ್ಕೆ ಬಿದ್ದುವು ಗಂಟಲಿನ ಗೋಮಾಳಿ ಗಂಟಲನ್ನೇ ಒತ್ತಿದುವು. ಇಷ್ಟೆಲ್ಲಾ ಮಾಡಿದರೂ ಗುಂಡಯ್ಯ ನಮ್ಮ ಕೈತಪ್ಪಿ ಹೋಗುವನೇ! ಮಧ್ಯಾಹ್ನ ಇನ್ನು ಮೇಲೆ ಯಾರು ಹಾಗೆ ಗರಮಾಗರಂ ಥಂಡನೀರು ಮಸಾಲೆ ಮಜ್ಜಿಗೆ ಕೊಡುವವರು? ಎಂದು ಬಾಯ ಎರಡಂಚಿನಲ್ಲೂ ಮುಪ್ಪಿನ ರೇಖೆಗಳು ತೋರಿಬಂದುವು.

ನಮ್ಮನ್ನು ನೋಡಿ ಡಾಕ್ಟರಂದರು "ನಾನು ಹಾಗಂದ ಮಾತ್ರಕ್ಕೇ ನೀವು 'ಹೀಗೆ' ಆಗಬೇಕಾಗಿಲ್ಲ. ಗುಂಡಯ್ಯ ಖಾಯಿಲೆ ಇಲ್ಲ ದಿಟ! ಆದರೆ ಖಾಯಿಲೆ ಅಂತ ಸುಳ್ಳು ಹೇಳಿಕೊಂಡು ರಜಾಕ್ಕೆ ನನ್ನ ಹತ್ತಿರಬಂದ ಅಪರಾಧ, ದಿಟವಾಗಲೂ ಮಹಾಪರಾಧ. ಆ ಕಪಟ ನಟನೆಗಾಗಿ ಆತನಿಗೆ ಮೂರುವಾರ ಸಜಾ ಹಾಕಬೇಕು ಎಂದು ಬರೆದಿದ್ದೇನೆ" ಎಂದು.

* * *

ನಾಗಯ್ಯ ಮಂಡ್ಯದಲ್ಲಿ ಸಕ್ಕರೆ ತಿನ್ನುತ್ತಿರಬಹುದು. ಆದರೆ ನಮ್ಮ ಹೊಸ ಅಧಿಕಾರಿ ಗರುಡಾಚಾರ್ರು ನಮ್ಮೊಂದಿಗೆ ಗುಂಡಯ್ಯನ ನೀರುಮಜ್ಜಿಗೆ ಕುಡಿಯುತ್ತಿದ್ದಾರೆ. ಆ ಸಜಾವನ್ನು ಮಾಫಿಮಾಡಿ, ತಿರುಗಿ ದಫ್ತರ ಬಂದಿಯಾಗಿ ಗುಂಡಯ್ಯ ಬಿಸಿಲೇರಿದ ಮಧ್ಯಾಹ್ನ ಮೂರು ಗಂಟೆಗೆ, ಚಾತಕರಂತಿರುವ ನಮಗೆಲ್ಲಾ ಕಾಯಕಲ್ಪ ಮಾಡುತ್ತಿದ್ದಾನೆ.

—ಕುಮಾರ್.

—o—

ಇದು ಎಲ್ಲಿದೆ ಮತ್ತು ಏತಕ್ಕೆ ಪ್ರಸಿದ್ಧಿ ಎಂಬ ಪ್ರಶ್ನೆಗೆ ಕೊಟ್ಟಿದ್ದ "ಆಡಿಲೇಡ್" ಎಂಬುದಕ್ಕೆ ಒಬ್ಬ ಮಿಡ್ಲ್ ಸ್ಕೂಲ್ ವಿದ್ಯಾರ್ಥಿಯು ಇದು ಆಸ್ಟ್ರೇಲಿಯಾದಲ್ಲಿದೆ. ಇದು ಡಾನ್‌ಬ್ರಾಡ್‌ಮನ್ ಎಂಬ ಮಹಾ ಪುರುಷನ ಜನ್ಮಸ್ಥಳ ಮತ್ತು ವಾಸ ಸ್ಥಾನ ಎಂದು ಬರೆದಿದ್ದಾನಂತೆ.


—ಕೆ. ಬಿ. ಶ್ರೀ.

ಜೋಕೆ!

ಆತ:— ನಿನ್ನ ನಳಪಾಕವನು ಹಳಿದು ಕುಂಭೀಪಾಕ—
ಸೇರಲೊಲ್ಲೆನು ನಾನು ನಿನಗೆ ಗೊತ್ತೆನ್ನು!
ಆದರೇಕೋ ನೋಡು ಅಮ್ಮ ಮಾಡಿದ ಖೀರು
ಕುಡಿಯೋಣವೆನಿಸುತಿತ್ತಿನ್ನು ಇನ್ನೂ!

ಆಕೆ:— ನಿಮ್ಮ ಸದ್ಗುಣಗಳನು ಅಲ್ಲಗಳೆಯುವ ಪಾಪ
ಮಾಡೆನೆಂಬುದ ಎತ್ತಿ ಹೇಳಬೇಕೆ—
ಆದರೊಂದೇ ಮಾತು ಆರು ಕಪ್ ಮೀರಿದರೆ
ಖೀರು ಒಳ್ಳೆಯದಲ್ಲ— ಕೊಂಚ ಜೋಕೆ!

—ಸರೋಜಿನಿ ಆರೂರ್.



“ರಾತ್ರಿಯೆಲ್ಲಾ ಬಾಯಾರಿಕೆ, ನೀರುಬೇಕೊಂತ ಒದ್ದಾಡಿದ ಡಾಕ್ಟರೇ—ನಿಮ್ಮ ಔಷಧಿ ಕೊಡುತ್ತಲೂ ಇನ್ನೂ ಸ್ವಲ್ಪ ಕೊಡು ಅಂತ ಹಟಮಾಡಿದ್ದ. ಕುಂಬ ಔಷಧಿ ಕೊಡಿ ಡಾಕ್ಟರೇ ಇವತ್ತು.

ಚೌರ್ಯ

ಬರಬರುತ್ತ ನಮ್ಮೂರಲ್ಲಿ ಕಳ್ಳತನ ಹೆಚ್ಚಿಹೋಗಿದೆ. ಅಪ್ಪನ ಕಿಸೆಯಿಂದ ಮಕ್ಕಳೂ ಅಮ್ಮನ ಕುಡಿಕೆಯಿಂದ ಅಪ್ಪನೂ ಮಾಸ್ತರ ಕಿಸೆಯಿಂದ ಹುಡುಗರೂ ಹುಡುಗರ ಜೋಬಿಂದ ಮಾಸ್ತರೂ, ಕದಿಯುತ್ತಿದಾರೆ. ಈಚೆಗೆ, ಆಳತೆ ತೂಕಗಳಲ್ಲಿ ಚೌರ್ಯ, ಎಣಿಕೆಯಲ್ಲಿ ಮೋಸ, ಸಾಹಿತ್ಯದಲ್ಲಿ ಸಾಲ, ಕಾದಂಬರಿಗಳಲ್ಲಿ ಕಳ್ಳತನ, ದವಾಖಾನೆಗಳಲ್ಲಿ ದಗಾ, ಇವೂ ಸರ್ವೆ ಸಾಮಾನ್ಯ. ದರೋಡೆ ಲೂಟಿ ಇತ್ಯಾದಿ ಸಿನಿಮಾ ಚಾತುರ್ಯಗಳೂ ನಮ್ಮೂರಲ್ಲಿ ಮನೆಮಾಡಿಕೊಂಡಿವೆ.

ಆದರೆ ಬೊಂಬಾಯಲ್ಲೂ ಕೂಡ, ನಮ್ಮೂರಿನಷ್ಟು ಹೆಚ್ಚು ಸಂಖ್ಯೆಯಲ್ಲಿ ಚೌರ್ಯ ಶಾಸ್ತ್ರ ಪ್ರವೀಣರು ದೊರೆಯುವುದಿಲ್ಲವೆಂಬುದು ನಮ್ಮೂರಿನವರ ಹೆಮ್ಮೆ. ಮರ್ಯಾದಸ್ಥರೂ ಗೌರವಸ್ಥರೂ ನಮ್ಮೂರಲ್ಲಿ ಬಾಳುವಹಾಗೆಯೇ ಇಲ್ಲ; ಸತ್ಯವಂತರೆಲ್ಲರೂ ಸತ್ತು ಹತ್ತಾರು ವರ್ಷಗಳಾದುವು. ಆ ಮಾತು ಹಾಗಿರಲಿ, ಕೆಳ ಮಟ್ಟದ ಕಳ್ಳರೂ ಕೂಡ ನಮ್ಮೂರಲ್ಲಿ ಬಾಳಿ ಬದುಕುವ ಹಾಗಿಲ್ಲ.

ಹೋದ ತಿಂಗಳು ಸಂತೆಯಿಂದ ಬರುತ್ತಿದ್ದ ಸಾಹುಕಾರರೊಬ್ಬರನ್ನು ಇಬ್ಬರು ಕಳ್ಳರು ದಾರೀಲಿ ಅಡ್ಡಗಟ್ಟಿ ಅವರ ಹತ್ತಿರವಿದ್ದ ಗಂಟನ್ನು ಕದ್ದರು; ಆದರೆ, ವಿಧಿವಿಲಾಸ ಏನೇನೆಂದು ಹೇಳೋಣ, ಹತ್ತು ಹೆಜ್ಜೆ ಮುಂದಕ್ಕೆ ಹೋಗೋದರೊಳಗೆ, ಆ ಇಬ್ಬರನ್ನು ಬೇರೆ ಮೂವರು ಕಳ್ಳರು ತಡೆದು ನಿಲ್ಲಿಸಿ ಆ ಗಂಟನ್ನು ಕಸಿದೇ ಬಿಟ್ಟರು. ಮೊದಲನೆಯ ಗುಂಪಿನ ಇಬ್ಬರನ್ನು ಆ ಸಾಹುಕಾರರು ನೀರು ಕುಡಿಸಿ ಬದುಕಿಸಿ, ಅವರಿಬ್ಬರ ಹತ್ತಿರ ಉಳಿದಿದ್ದ ನೂರು ರೂಪಾಯನ್ನು ಊರಿಗೆ ಕದ್ದುತಂದರು! ಹೊರಗೆ ಚಪ್ಪಲಿಗಳನ್ನು ಬಿಟ್ಟು, ಒಳಕ್ಕೆ ನುಗ್ಗಿ ಮನೆಯ ಸಾಮಾನುಗಳನ್ನು ಕದಿಯಲು ಯತ್ನಿಸಿದರೆ, ಕಳ್ಳ ಹೊರಗೆ ಬರುವಾಗ, ಅವನ ಚಪ್ಪಲಿಯೇ ಮಂಗಮಾಯ! ಎತ್ತಿನ ಗಾಡೀಲಿ ಬೇರೆ ಊರಿಂದ ನಮ್ಮೂರಿಗೆ ದರೋಡೆಗೆ ಬರುವವರ ಗಾಡಿ ಗಾಡೀನೇ ಪರಾರಿ! ಯಾವ ಮನೆಗೆ ಕನ್ನ ಕೊರೆದು ನುಗ್ಗುತ್ತಾರೋ, ಆ ಮನೆಯವನೇ

ಕನ್ನಡವರ ಹಾರಿ ಗುದ್ದಲಿಗಳನ್ನು ಮೆತ್ತಗೆ ಕದ್ದು, ಪಕ್ಕದಮನೆಗೆ ಕನ್ನಕೊರೆದು ತನಗಾದ ನಷ್ಟವನ್ನು, ಅಲ್ಲಿಂದಲೇ ಪೂರೈಸ ಹತ್ತಿದಾರೆ. ನಮ್ಮೂರಲ್ಲಿ!

ಮೊನ್ನೆ ಶಾಸ್ತ್ರಿಗಳ ಮನೇಲಿ ಒಂದು ಚೌರ್ಯ ಚಮತ್ಕಾರ ನಡೆಯಿತು. ಎಂಥದೋ ಸದ್ದಾಯಿತು ಅಂತ ಶಾಸ್ತ್ರಿಗಳು ದೇವರಮನೆಯಿಂದ ನಡುಮನೆಗೆ ನಡುರಾತ್ರೀಲಿ ಇಣಿಕಿ ನೋಡಿದರು. ನಾಲ್ಕು ಜನ ಕೇಡಿಗಳು ಮೊಂಬತ್ತಿ ಸುತ್ತ ಕೂತು, ಶಾಸ್ತ್ರಿಗಳ ಪೆಟಾರಿಯನ್ನ ಹೇಗೆ, ತೆರೆಯೋದು ಎಂದು ಚರ್ಚಿಸುತ್ತಿದ್ದರು. ಬೀಗ ಹಾಕಿದ ಪೆಟಾರೀನ ತೆರೆಯೋದು ಹೇಗೆ, ತೆರೆಯೋದು ಹೇಗೆ ಎಂದು ತಲೆ ಕೆರೆದುಕೊಳ್ಳುತ್ತಿದ್ದ ಆ ಮಂಕುದಿಣ್ಣೆಗಳಿಗಾಗಿ ಪರಿತಪಿಸಿದರು, ಶಾಸ್ತ್ರಿಗಳು. ಆಗ, ಕಿಟಕಿಯಿಂದ ಇನ್ನೊಬ್ಬ ಮೆತ್ತಗೆ ಇಳಿದು, ಆ ನಾಲ್ವರ ಕಿಸೆಗಳನ್ನು ಕತ್ತರಿಸಿ ಕಂತೆ ನೋಟುಗಳನ್ನು ಕದ್ದನಂತೆ. ಆಗ, ಶಾಸ್ತ್ರಿಗಳು ಹಿತ್ತಲ ಬಾಗಿಲ ಮೂಲಕ ಹೊರಕ್ಕೆ ಓಡಿ, ಆ ಕಿಸೆ ಹರಕನನ್ನ ಗೇಟ್ ಹತ್ತಿರ ಹೆದರಿಸಿ, ಅವನಲ್ಲಿದ್ದ ಹಣವನ್ನೆಲ್ಲ ತಾವು ಸಂಪಾದಿಸಿಕೊಂಡರಂತೆ. ಹೀಗೆ, ನಡೆಯುತ್ತಿದೆ ನಮ್ಮೂರಲ್ಲಿ, ಕಳ್ಳನಮೇಲೆ ಕಳ್ಳನ ಕಣ್ಣು, ದರೋಡೆ ಮಾಡಿದನವ ಕಿಸೆ ದರೋಡೆ ಮಾಡಿದವನ ಕಿಸೆಗೇ ದರೋಡೆ. ಮೀನು ಹಕ್ಕಿಬಾಯಿಗೆ, ಮೀನೂ ಹಕ್ಕೀನೂ ಗಿಡಗನಬಾಯಿಗೆ.

ತರಗತಿಯಲ್ಲಿರುವ ೮೫ ಹುಡುಗರ ಕಿಸೆಗಳನ್ನೂ ಜಪ್ತಿಮಾಡಿ ನಮ್ಮೂರು ಮೇಷ್ಟರು ೧೧ ಸೇರು ಕಡಲೆ ಪುರಿ, ೬ ಇಸ್ಪೀಟ್ ಪ್ಯಾಕೆಟ್ ಸಂಪಾದಿಸುವುದೇ ತಡ, ಅದನ್ನ ಅವರ ಮೇಜಿನೊಳಗಿಂದ ಜವಾನ ಕದಿಯುತ್ತಾನೆ; ಜವಾನನ ಚೀಲದಿಂದ ಮತ್ತೆ ಮಾಸ್ತರೇ ಕದ್ದುಬಿಡ್ತಾರೆ.

ಚೌರ್ಯ ಕಲಿಯಲಾಸೆಯುಳ್ಳವರು ನಮ್ಮೂರಿನವರನ್ನ ತಮ್ಮ ತಮ್ಮ ಊರುಗಳಿಗೆ ಆಹ್ವಾನಿಸಿ ಅಲ್ಲೇ ಇರಿಸಿಕೊಂಡ ಹೊರತು, ನಮ್ಮೂರಲ್ಲಿ ಕಳ್ಳತನದ ಹಾವಳಿ ನಿಲ್ಲುವಂತೆಯೇ ಇಲ್ಲ. ಸತ್ಯವಾಗಿ, ಸ್ವತಂತ್ರ ಜೀವನದಿಂದ, ಸ್ವಸಂಪೂರ್ಣರಾಗಿ ಬದುಕುವುದನ್ನೇ ನಾವು ಮರೆತುಬಿಟ್ಟಿದೇವೆ.

— ಕಾಮತ್.

ಇನ್ನು ಮುಂದೆ ಇಂಟರ್‌ಮಿಡಿಯೇಟ್ ತರಗತಿಯ ಕನ್ನಡ ಪದ್ಯ ಪುಸ್ತಕಕ್ಕೆ "ಮರಳಿಯತ್ನವ ಮಾಡು, ಮರಳಿಯತ್ನವ ಮಾಡು" ಎಂಬ ಪದ್ಯವನ್ನು ಸೇರಿಸುವರೆಂದು ಗೊತ್ತಾಗಿದೆ.

— ಕೆ. ಬಿ. ಶ್ರೀ.


ಜೀವನಚರಿತ್ರೆ

"............. ....", "................." ರಿಂದ.

* * *

ಓದಿದೆ ಪುಸ್ತಕ............... ಖ್ಯಾತಿಯ ಲೇಖಕ.
ಇದೆಯೇ ಈತನ 'ಜೀವನ'ಚರಿತ್ರೆ?
ಲೇಖಕ ಕಂಡುದು ಇಷ್ಟೇನೆ?
ಲೇಖನಿ ಕೆರೆದದ್ದಿಷ್ಟೇನೆ?
ಹೀಗೆಯೆ ಈತನು ಬಾಳಿದನೆ?

ನನ್ನೀ ಬಾಳನು ಬದುಕನು ಹೀಗೆಯೆ
ಯಾವನೊ ತೇಲಿಸಿ 'ಜೀವನ' ಬರೆವನೆ?
ನನಗೇ ತಿಳಿಯದ ಸಾಸಿರ ತಳಮಳ,—
ಏಕೊ, ಏನೂ, ಎತ್ತಣ, ಸುತ್ತಣ,
ಹೊರಗಿನ ವೇಷ, ಮೆರುಗಿನ ಮೋಸ
ಒಳಗಣ ವ್ಯಾಘ್ರ ನರ ಕುರಿ ಗಡಣ,—
ನಾನೇ ಬರೆದರು ಮೋಸದ ಕಂತೆ!
ಯಾವನೊ ಬರೆದದು, ಹಾ!, ಸರಿಯಂತೆ!



ಕಿಕ್ಕಿರಿದ ಪ್ರೇಕ್ಷಕವೃಂದಕ್ಕೆ ಪ್ರದರ್ಶಿಸಲ್ಪಡುತ್ತಿದೆ

—: ಬೆಂಗಳೂರು :—

ಭಾರತ್ ಮತ್ತು ವಿಜಯಾ
ರೂಪಮಹಲ್ (ಸಿವಿಲ್ ಏರಿಯಾ)

(ದಿನವಹಿ 3 ಪ್ರದರ್ಶನಗಳು)

ವಿಜಯಲಕ್ಷ್ಮಿಯವರ

★ # పేరంటాలు ★

(ತೆಲುಗು)

★

ಪ್ರಧಾನ ಭೂಮಿಕೆಯಲ್ಲಿ:

ಕೃಷ್ಣವೇಣಿ, ಲಕ್ಷ್ಮೀಕಾಂತಂ, ಮಾಲತಿ,
ನಾರಾಯಣರಾವ್, ಮುಕ್ಕಾಮಲ, ರೇಲಂಗಿ
ಮುಂತಾದವರು

Distributors for Mysore State, South Canara & Coorg

AMRIT PICTURES,

GANDHI NAGAR :: :: BANGALORE-2

ಕೊರವಂಜಿ

ಬಳೇಪೇಟೆ : : ಬೆಂಗಳೂರು 2

ಬಿಡಿ ಪ್ರತಿ ಕೇವಲ ನಾಲ್ಕಾಣೆ

ವಾರ್ಷಿಕ ಚಂದಾ: ಕೇವಲ 3 ರೂ. ಗಳು (ಅಂಚೆ ವೆಚ್ಚ ಸಹಿತ)

ನಮ್ಮ ಹೊಸ ಮಾರಾಟಗಾರರು

Ms. GANAPATHI STORES

Proprietor:

H. NARAYANA RAO & SONS

HULIYAR

Sri. H. S. SURYANARAYANA

News Agents, KADUR

25-5-51ರಿಂದ ಪ್ರದರ್ಶಿಸಲ್ಪಡುತ್ತಿದೆ

ಬೆಂಗಳೂರು **ಪ್ರಭಾತ್** ಚಿತ್ರ ಮಂದಿರದಲ್ಲಿ

ಲಾರಲಪ್ಪ-ಲಾರಲಪ್ಪ ಹಾಡಿನಿಂದ ನಿಮ್ಮ ಮನಸೆಳೆದ ತಾರೆ

ಮೀನಾ

ಈಗ "ಹಲ್ಲಾ-ಗುಲ್ಲಾ" ಎಂಬ ಹಾಡಿನಿಂದ
ನಿಮ್ಮ ಮನವೊಲಿಸುವಳು

★

ಆರ್. ಎಲ್. ಷೋರಿಯವರ—

ಢೋಲಕ್ - DHOLAK

(ಚಿತ್ರದಲ್ಲಿ)

★

ಸಹಾಯಕ ವರ್ಗ :—

ಅಜಿತ್ - ಯಶೋಧರಾ ಖಟ್ಜು ಮತ್ತು
ಮನ್‌ಮೋಹನ್

ಸಂಗೀತ: ಶ್ಯಾಮ್‌ಸುಂದರ್

ಶೀಘ್ರದಲ್ಲಿಯೇ ಮೈಸೂರು **ಪ್ರಭಾ** ಪಿಕ್ಚರ್ ಹೌಸ್‌ನಲ್ಲಿ

A Rajshri Release

ಜೂನ್ ತಿಂಗಳಲ್ಲಿ ಪ್ರದರ್ಶನಾರಂಭ !!

ಗಣಪತಿ ಪಿಕ್ಚರ್ಸ್‌ರವರ

ದೇವಕಿ

(ಸಾಮಾಜಿಕ ತಮಿಳು ಚಿತ್ರ)

★

ಭೂಮಿಕೆಯಲ್ಲಿ :

ಮಾಧುರಿದೇವಿ, ಜಾನಕಿ, ನಂಬಿಯಾರ್,

ಕಣ್ಣಪ್ಪ, ಬಾಲಚಂದ್ರನ್

ಮುಂತಾದವರು


★

ನಿಮ್ಮ ನೆಚ್ಚಿನ ಚಿತ್ರಮಂದಿರಗಳಲ್ಲಿ
ಪ್ರದರ್ಶನವಾಗಲಿರುವ ತಾರೀಖನ್ನು ಗಮನಿಸಿ !!

A Gallam Release

REG. No. M. 4718 KORAVANJI JUNE 1951

ಶೀಘ್ರದಲ್ಲಿಯೇ ಪ್ರದರ್ಶನವಾಗಲಿದೆ !!



ಅಶ್ವಿನಿ ಪಿಕ್ಚರ್ಸ್‌ರವರ

ಮಾಯಲ ಮಾರಿ (ತೆಲುಗು)

ಮತ್ತು

ಮಾಯಕ್ಕಾರಿ (ತಮಿಳು)

ಅಂಜಲೀದೇವಿ - ನಾಗೇಶ್ವರರಾವ್ - ಶಿವರಾವ್

ಮುಕ್ಕಾಮುಲ ರವರ ಅಭಿನಯ

ನಿಮ್ಮ ನೆಚ್ಚಿನ ಚಿತ್ರಮಂದಿರಗಳಲ್ಲಿ ನಿರೀಕ್ಷಿಸಿ

A TALLAM RELEASE

Printed by B S Iyengar, Bangalore City
Publisher - B N Gupta Editor—M Sivaram